ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 40 ಅಕ್ಟೋಬರ್ 10, 1982 ಬೆಲೆ 60 ಪೈಸೆ

ಕೋಮು ಗಲಭೆಗೆ ನಿರಪರಾಧಿಗಳ ಬಲಿ

ಮಿೂರತ್ ಹಿಂಸಾಚಾರದ ಬಗ್ಗೆ ಪಿ.ಬಿ. ಖಂಡನೆ

ಉತ್ತರ ಪ್ರದೇಶದ ಒಂದು ದೊಡ್ಡ ನಗರವಾದ ಮಿೂರತ್‌ನಲ್ಲಿ ಕೋಮು ಗಲಭೆಗೆ ಇಪ್ಪತನಕ ಮೂವತ್ತು ನಿರಪರಾಧಿಗಳು ಬಲಿಯಾಗಿದ್ದಾರೆ. ಕಾಂಗ್ರೆ ಸರಕಾರದ ಸಮರ್ಥತೆ ಮತ್ತು ಜಾತ್ಯಾತೀತತೆಯ ನಿಜವಾದ ಮುಖವನ್ನು ಮಿೂರತ್‌ನ ಘಟನೆಗಳು ಎತ್ತಿ ತೋರಿಸುತ್ತಿವೆ. ಮಿೂರತ್ ನಗರದಲ್ಲಿ ಶಾಂತಿ ಮತ್ತು ಸೌಹಾರ್ದತೆ ಇನ್ನೂ ಬಹಳ ದೂರದ ಮಾತಾಗಿದೆ. ಮಿೂರತ್‌ನ ಘಟನೆಗಳ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋವು ತನ್ನ ತೀವ್ರವಾದ ಆತಂಕವನ್ನು ವ್ಯಕ್ತಪಡಿಸಿದೆ ಮತ್ತು ಇದನ್ನು ನಿಲ್ಲಿಸದಿದ್ದಲ್ಲಿ ಅದು ದೂರ ಪ್ರದೇಶಗಳಿಗೂ ಹರಡುವ ಅಪಾಯವಿದೆ ಎಂದು ಪಿ. ಬಿ. ಯು. ಎಚ್ಚರಿಸಿದೆ. ಹತ್ತಾರು ಮಂದಿ ಸಾವನ್ನಪ್ಪಿರುವುದಲ್ಲದೆ ನೂರಾರು ಮಂದಿ ಬಂಧನಕ್ಕೊಳಗಾಗಿದ್ದಾರೆ.

ಹಿಂದುಗಳು ದೇವಾಲಯವೆಂದೂ ಮುಸಲ್ಮಾನರು ಗೋರಿಯೆಂದೂ ಹೇಳುತ್ತಿದ್ದ ಒಂದು ಸಣ್ಣ ಕಟ್ಟಡದ ಬಗ್ಗೆ ಕಳೆದ ಫೆಬ್ರವರಿಯಿಂದ ಎರಡು ಕೋಮುಗಳಿಗೆ ಸೇರಿದವರ ಮಧ್ಯೆ ಬಿಗಿಯಾದ ವಾತಾವರಣ ಬೆಳೆದು ಬಂತು. ಸಮಯಕ್ಕೆ ಸರಿಯಾಗಿ ಸೂಕ್ತ ಕ್ರಮವನ್ನು ತೆಗೆದುಕೊಂಡು ಪರಿಸ್ಥಿತಿಯನ್ನು ಹತೋಟಿಗೆ ತರುವುದರಲ್ಲಿ ಸ್ಥಳೀಯ ಆಡಳಿತವು ವಿಫಲವಾಯಿತು. ಪೋಲೀಸ್ ಇಲಾಖೆಯ ಬಗ್ಗೆ ಹೇಳುವುದಿದ್ದರೆ, ಪರಿಸ್ಥಿತಿಯು ಹಿಂಸಾತ್ಮಕ ರೂಪವನ್ನು ಪಡೆಯುವಂತೆ ಮಾಡುವುದಕ್ಕೆ ಕೆಲವು ಪೋಲೀಸ್ ಅಧಿಕಾರಿಗಳೇ ಕಾರಣವೆಂಬ ವದಂತಿಯಿದೆ. ಎರಡು ಕೋಮುಗಳಿಗೆ ಸೇರಿದ ಈರ್ವರು ಕಾಂಗ್ರೆ ಶಾಸಕರುಗಳು ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಪ್ರಯತ್ನಿಸುವ ಬದಲು, ಅದನ್ನು ಇನ್ನೂ ಬಿಗಡಾಯಿಸುವಂತೆ, ಆಸ್ಫೋಟಗೊಳ್ಳುವಂತೆ ಮಾಡಿರುವರು. ಎರಡು ಕೋಮಿಗೆ ಸೇರಿದ ಜಾತೀಯವಾದಿಗಳಂತೂ ಅಡೆತಡೆಯಿಲ್ಲದೆ ಕೋಮುಭಾವನೆಯ ವಿಷವನ್ನು ಬಿತ್ತುತ್ತಿರುವರು. ಈ ರೀತಿಯ ಎಲ್ಲಾ ಘಟನೆಗಳಾಗುವಂತೆ, ಮಿೂರತ್ ಹಿಂಸಾಚಾರದಲ್ಲೂ, ಜನಸಾಮಾನ್ಯರು, ಅದರಲ್ಲೂ ಅಲ್ಪಸಂಖ್ಯಾತ ಕೋಮಿಗೆ ಸೇರಿದ ಜನಸಾಮಾನ್ಯರು ಹೆಚ್ಚಿಗೆ ಕಷ್ಟ ನಷ್ಟಕ್ಕೆ ಈಡಾಗಿದ್ದಾರೆ. ಇವರೆಲ್ಲರಿಗೆ ಸಿ.ಪಿ.ಐ. (ಎಂ) ಪೊಲಿಟ್‌ಬ್ಯೂರೋವು ತನ್ನ ಅನುಕಂಪವನ್ನು ತೋರಿಸುತ್ತದೆ.

ಕೋಮುವಾದಿ ಶಕ್ತಿಗಳ ಮೇಲೆ ಅಗತ್ಯವಿರುವ ಕ್ರಮ ತೆಗೆದುಕೊಂಡು ಪರಿಸ್ಥಿತಿಯನ್ನು ಹತೋಟಿಗೆ ತಂದು ಶಾಂತಿಯನ್ನು ಸ್ಥಾಪಿಸಲು ಉತ್ತರ ಪ್ರದೇಶ ಸರಕಾರವು ತುರ್ತುಕ್ರಮ ವಹಿಸುವಂತೆ ಪೊಲಿಟ್‌ಬ್ಯೂರೋವು ಒತ್ತಾಯಿಸುತ್ತದೆ. ಅದೇ ಸಂದರ್ಭದಲ್ಲಿ ಜನಸಾಮಾನ್ಯರನ್ನು ಬಲಿ ತೆಗೆದುಕೊಳ್ಳದಂತೆಯೂ ಸರಕಾರವನ್ನು ಎಚ್ಚರಿಸುತ್ತದೆ.

ಪರಿಸ್ಥಿತಿಯ ಗಂಭೀರತೆಯನ್ನು ಅರಿತು, ಮಧ್ಯ ಪ್ರವೇಶ ಮಾಡಿ ಕೋಮು ಶಕ್ತಿಗಳನ್ನು ಜನತೆಯಿಂದ ಪ್ರತ್ಯೇಕಿಸಿ, ಜನತೆಯ ಮಧ್ಯೆ ಅಭಿಪ್ರಾಯ ಮೂಡಿಸಿ ಕೋಮು ಗಲಭೆಗಳಿಗೆ ತಡೆ ಹಾಕಲು ಮುಂದಾಗುವಂತೆ ಎಲ್ಲಾ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಪೊಲಿಟ್‌ಬ್ಯೂರೋವು ಕರೆ ಈಯುತ್ತದೆ.

ಪಾರ್ಲಿಮೆಂಟಿನಲ್ಲಿರುವ ಆರು ಎಡ ಪಕ್ಷಗಳ ಸಮನ್ವಯ ಸಮಿತಿಯೂ ಮಿೂರತ್ ಗಲಭೆಯನ್ನು ಖಂಡಿಸಿದೆ. ಮಿೂರತ್ ನಗರಕ್ಕೆ ಎಲ್ಲಾ ವಿರೋಧ ಪಕ್ಷಗಳ ಪ್ರಮುಖರ ತಂಡವೊಂದು ಭೇಟ್ಟಿಯಿತ್ತು, ಪರಿಸ್ಥಿತಿಯ ಅಧ್ಯಯನ ನಡೆಸಿ, ಶಾಂತಿಗಾಗಿ ವಿನಂತಿಸಿದೆ.

ಸಂಪಾದಕೀಯ

ರೈತ ಚಳುವಳಿ

ರೈತರೂ, ಹಳ್ಳಿಯ ಬಡವರೆಲ್ಲರೂ, ಕಾರ್ಮಿಕರೂ, ಜನಸಾಮಾನ್ಯರೂ ಸೇರಿದಂತೆ ಎಲ್ಲ ಜನ ವಿಭಾಗಗಳ ಶೋಷಣೆ ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ನಡೆಯುತ್ತಿದೆ. ಬಂಡವಾಳ ಶಾಹಿ ವ್ಯವಸ್ಥೆಯು ಬೆಳೆದಂತೆಲ್ಲಾ ರೈತರು ದಿವಾಳಿಯಾಗುವುದು ಅದರ ನಿಯಮವಾಗಿದೆ. ಆದುದರಿಂದಲೇ ಹಳ್ಳಿಯ ಬಡಜನರೂ, ರೈತರೂ, ಪೇಟೆ ಪಟ್ಟಣಗಳ ಕಾರ್ಮಿಕರೂ, ಎಲ್ಲ ಜನಸಾಮಾನ್ಯರೂ ಒಂದಾಗಿ ಹೋರಾಟ ಹೂಡಿದರೇನೇ ಸಮಸ್ಯೆಗಳಿಗೆ ಪರಿಹಾರ ದೊರೆಯುವುದು ಸಾಧ್ಯ. ಇಂದಿನ ಶೋಷಣಾ ವ್ಯವಸ್ಥೆಯನ್ನು ಬದಲಾಯಿಸುವುದೂ ಸಾಧ್ಯ. ಶೋಷಣೆಯ ವಿರುದ್ಧ ಹೋರಾಡಲು ರೈತರಿಗಿರುವ ಆಸ್ತ್ರೆಂದರೆ ಕಾರ್ಮಿಕ ವರ್ಗ. ಅಖಿಲ ಭಾರತ ಕಿಸಾನ್ ಸಭಾಕ್ಕೆ ಸೇರ್ಪಡೆಯಾಗಿರುವ ಕರ್ನಾಟಕ ಪ್ರಾಂತ ರೈತ ಸಂಘದ ದೃಷ್ಟಿಯೂ ಇದೇ ಆಗಿದೆ. ಇದು ಸರಿಯಾದ ದೃಷ್ಟಿಕೋನವಾಗಿದೆ.

ಕರ್ನಾಟಕ ಪ್ರಾಂತ ರೈತ ಸಂಘವು ಹತ್ತು ಲಕ್ಷ ಸಹಿ ಸಂಗ್ರಹದ ಕಾರ್ಯಕ್ರಮವನ್ನು ನಡೆಸುತ್ತಿದೆ. ಹಳ್ಳಿಯ ಬಡವರಿಗೆ ತಿಳುವಳಿಕೆ ನೀಡಿ, ಸಂಘಟಿಸಿ, ಹೋರಾಟ ಮಾಡುವುದು ಇದರ ಉದ್ದೇಶವಾಗಿದೆ. ಎಲ್ಲಾ ರೈತರ ಬೇಡಿಕೆಯಾದ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಸಿಗಬೇಕೆನ್ನುವ ಬೇಡಿಕೆಗೆ ಬೆಂಬಲವಿತ್ತು ಹೋರಾಡುವುದರೊಂದಿಗೇ, ಹಳ್ಳಿಯ ಬಡವರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುವುದು ಅತ್ಯಂತ ಅವಶ್ಯವಿದೆ. ಕರ್ನಾಟಕ ಪ್ರಾಂತ ರೈತ ಸಂಘವು ಈ ದಿಸೆಯಲ್ಲಿ ಮುನ್ನಡೆಯುತ್ತಿದೆ. ಡಿಸೆಂಬರ್ 13ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ಬೃಹತ್ ಮತಪ್ರದರ್ಶನ ನಡೆಸಿ ದಶಲಕ್ಷ ಸಹಿ ಮಾಡಿರುವ ಮನವಿಯನ್ನು ಸರ್ಕಾರಕ್ಕೆ ಕೊಡಲು ಪ್ರಾಂತ ರೈತ ಸಂಘವು ಸಜ್ಜಾಗುತ್ತಿದೆ. ಇದಕ್ಕೆ ಪೂರ್ವಭಾವಿಯಾಗಿ ಅಕ್ಟೋಬರ್ 11ರಂದು ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ಕಾರ್ಯಕ್ರಮ ಹಾಕಲಾಗಿದೆ.

ಶ್ರೀಮಾನ್ ರುದ್ರಪ್ಪನವರ ನೇತೃತ್ವದ ರಾಜ್ಯ ರೈತ ಸಂಘವು ಅಕ್ಟೋಬರ್ 2ರಂದು ಬೆಂಗಳೂರಿನಲ್ಲಿ ನಡೆಸಿದ ರ್‍ಯಾಲಿಯಲ್ಲಿ ಒಂದು ಲಕ್ಷಕ್ಕೂ ಮಿೂರಿ ರೈತರು ಸೇರಿದ್ದರು. ನೂರಾರು ಲಾರಿ, ಬಸ್ಸು, ಟ್ರಾಕ್ಟರುಗಳಲ್ಲಿ ರೈತರನ್ನು ತುಂಬಿ ತರಲಾಗಿದ್ದಿತು. ಮುಖ್ಯವಾಗಿ ಹಾಸನ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ಬಳ್ಳಾರಿ ಜಿಲ್ಲೆ, ಮಂಡ್ಯ ಜಿಲ್ಲೆಗಳಿಂದಲೇ ಹೆಚ್ಚಿನ ಜನರು ಬಂದಿದ್ದರು. ಅದೇನೇ ಇದ್ದರೂ ಬೆಂಗಳೂರಿನಲ್ಲಿ ಸೇರಿರುವ ಈ ಮತ ಪ್ರದರ್ಶನವು ರೈತರಲ್ಲಿ ಬೆಳೆದಿರುವ ಅತೃಪ್ತಿಯನ್ನು ಎದ್ದು ತೋರಿಸುತ್ತದೆ.

ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕ್ರಮಗಳು ಮತ್ತು ಅದು ಬೆಂಗಳೂರಿನಲ್ಲಿಯೇ ನಡೆಸಲಿರುವ ಡಿಸೆಂಬರ್ 13ರ ರ್‍ಯಾಲಿಯು ಅಕ್ಟೋಬರ್ 2ರ ರ್‍ಯಾಲಿಗೆ ಪ್ರತಿಸ್ಪರ್ಧಿಯಾಗಿ ನಡೆಸುತ್ತಿಲ್ಲ. ಬದಲು ರುದ್ರಪ್ಪನವರ ನೇತೃತ್ವದ ರೈತ ಸಂಘದ ಬೇಡಿಕೆಗಳಷ್ಟೆ ಅಲ್ಲದೆ ಹಳ್ಳಿಯ ಬಡ ಜನತೆಗೆ ಸಂಬಂಧಿಸಿರುವ ಅನೇಕ ತುರ್ತು ಬೇಡಿಕೆಗಳನ್ನು ಸೇರಿಸಿಕೊಂಡು ವ್ಯಾಪಕವಾಗಿ ಹೋರಾಟ ನಡೆಸಲು ಮಾಡುವ ತಯಾರಿಯಾಗಿದೆ. ಕಾರ್ಮಿಕ ವರ್ಗ ಮತ್ತು ಇತರೆ ಜನ ವಿಭಾಗಗಳ ಬೆಂಬಲದೊಂದಿಗೆ ಡಿಸೆಂಬರ್ 13ರ ರ್‍ಯಾಲಿ ನಡೆಯಬೇಕು. ಬೇರೆ ಬೇರೆ ರೈತ ಸಂಘಗಳು ಒಗ್ಗಟ್ಟಾಗಿ ಸಂಯುಕ್ತ ಚಳುವಳಿಯನ್ನು ನಡೆಸುವ ಆಗತ್ಯವಿದೆ. ಇದಕ್ಕೆ ತಾನು ಸಿದ್ಧವಿರುವುದಾಗಿ ಕರ್ನಾಟಕ ಪ್ರಾಂತ ರೈತ ಸಂಘವು ಸಾರಿದೆ. ಆದರೆ ಉಳಿದ ಕೆಲವು ರೈತ ಸಂಘಟನೆಗಳ ನಿಲುವೆಯು ಇದಕ್ಕೆ ಪ್ರತಿಕೂಲವಾಗಿದೆ.

ಯಾವ ರಾಜಕೀಯ ಪಕ್ಷಗಳ ಸಂಬಂಧ ಅಥವಾ ರಾಜಕೀಯವೇ ಬೇಡ ಎನ್ನುವ ರುದ್ರಪ್ಪನವರ ರೈತ ಸಂಘದ ನಿಲುವಿನಲ್ಲಿ ಅದರದ್ದೆ ರಾಜಕೀಯವಿದೆ. ಈ ನಿಲುವೆಯು ಐಕ್ಯ ಚಳುವಳಿ ಮತ್ತು ದೀರ್ಘಕಾಲದ ಹೋರಾಟಕ್ಕೆ ಪ್ರತಿಕೂಲವಾಗಿದೆ. ರಾಜಕೀಯವೇ ಬೇಡವೆಂದು ಹೇಳುತ್ತಿದ್ದ ತಮಿಳುನಾಡಿನ ನಾರಾಯಣಸ್ವಾಮಿ ನಾಯ್ಡು ನೇತೃತ್ವದ ರೈತ ಸಂಘವು ಇತ್ತೀಚೆಗೆ ಪೆರಿಯಾಕುಳಂ ಲೋಕಸಭಾ ಉಪ ಚುನಾವಣೆಯಲ್ಲಿ ಪಾಂಡಿಯನ್ ಎಂಬುವರನ್ನು ತನ್ನ ಪಕ್ಷೇತರ ಅಭ್ಯರ್ಥಿಯಾಗಿ ನಿಲ್ಲಿಸಿ ಆರೇಳು ಸಾವಿರ ಮತ ಗಳಿಸಿರುವುದು ರಾಜಕೀಯವಲ್ಲವೆ?

"ಯಶಸ್ವೀ ಶಾಂತಿ ಯಾತ್ರೆ" ನವದೆಹಲಿಯಲ್ಲಿ ಬೃಹತ್ ಮತ ಪ್ರದರ್ಶನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಸಿ. ಪಿ. ಐ., ಆರ್. ಎಸ್. ಪಿ., ಡಿ. ಎಸ್. ಪಿ, ಪಿ. ಡಬ್ಲ್ಯೂ. ಪಿ., ಮತ್ತು ಫಾರ್ವರ್ಡ್‌ಬ್ಲಾಕ್‌ಗಳೂ ಸೇರಿ ಆರು ಪಕ್ಷಗಳು ಜೊತೆಯಾಗಿ ನೀಡಿದ ಕರೆಯ ಮೇರೆಗೆ ಅಕ್ಟೋಬರ್ 4ರಂದು ಪಾರ್ಲಿಮೆಂಟಿನ ಚಳಿಗಾಲದ ಅಧಿವೇಶನದ ಪ್ರಾರಂಭದ ದಿನ, ರಾಷ್ಟ್ರದ ರಾಜಧಾನಿಯಾದ ನವದೆಹಲಿಯಲ್ಲಿ ಬೃಹತ್ "ಯುದ್ಧ ವಿರೋಧಿ ಮತ್ತು ಶಾಂತಿಗಾಗಿ" ಮತ ಪ್ರದರ್ಶನ ನಡೆಯಿತು. ಲಕ್ಷೋಪ ಲಕ್ಷ ಜನರಿಂದ ಸೇರಿದ ಮೆರವಣಿಗೆಯು ಹೊರಟ ಸ್ಥಳದಿಂದ ಬೋಟ್ ಕ್ಲಬ್ ಸೇರಲು ಆರೂವರೆ ತಾಸು ತಗಲಿತು. ಕಾರ್ಮಿಕರು, ನೌಕರರು, ರೈತರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಮತ್ತು ಬುದ್ಧಿಜೀವಿಗಳು ಭಾಗವಹಿಸಿರುವ ಈ ಶಾಂತಿ ಯಾತ್ರೆಯು ಅಮೇರಿಕನ್ ಸಾಮ್ರಾಜ್ಯಶಾಹಿಯ ಯುದ್ಧಕೋರ ನೀತಿಗಳನ್ನು ವಿರೋಧಿಸುವ ನಿರ್ಧಾರವನ್ನು ಎತ್ತಿ ತೋರಿಸುತ್ತಿತ್ತು. ವರ್ಣರಂಜಿತವಾದ ಮೆರವಣಿಗೆಯು ಬೋಟ್ ಕ್ಲಬ್ಬನ್ನು ಸೇರಿದಾಗ ಅಲ್ಲಿ ಜನಸಾಗರವೇ ಸೇರಿದಂತಿತ್ತು. ಯಾವಾಗಲೂ ಹಸುರಾಗಿ ಕಾಣುತ್ತಿದ್ದ ಆ ಪ್ರದೇಶವು ಅಂದು ಕೆಂಪಾಗಿ ಕಂಡು ಬಂತು.

ಬೋಟ್ ಕ್ಲಬ್ಬಿನಲ್ಲಿ ಸೇರಿದ ಜನಸ್ತೋಮವನ್ನುದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತಾರರಾದ ಕಾಂ| ಇ. ಎಂ. ಎಸ್. ನಂಬೂದಿರಿಪಾಡ್, ಬಿ. ಟಿ. ರಣದಿವೆ, ಮತ್ತು ಹರಿಕಿಷನ್‌ಸಿಂಗ್ ಸುರ್‌ಜಿತ್, ಸಿ.ಪಿ.ಐ ನ ನೇತಾರರುಗಳಾದ ಕಾಂ| ಸಿ. ರಾಜೇಶ್ವರರಾವ್ ಮತ್ತು ಇಂದ್ರಜಿತ್ ಗುಪ್ತ ಹಾಗೂ ಇತರೆ ಪಕ್ಷಗಳ ನೇತಾರರೂ ಭಾಷಣಮಾಡಿದರು. ಅಮೇರಿಕನ್ ಸಾಮ್ರಾಜ್ಯಶಾಹಿ ಮತ್ತು ಇತರೆ ಸಾಮ್ರಾಜ್ಯಶಾಹಿ ಶಕ್ತಿಗಳುಜಗತ್ತನ್ನು, ಮಾನವ ಕುಲವನ್ನು ಅಣುಯುದ್ಧದ ಅಂಚಿಗೆ ತಳ್ಳುತ್ತಿರುವುದನ್ನು ಖಂಡಿಸಿದ ಭಾಷಣಕಾರರು, ಭಾರತ ದೇಶದ ಜನತೆಯು ಎಚ್ಚೆತ್ತು ಜಗತ್ತಿನಾದ್ಯಂತ ಬೆಳೆದು ಬಂದಿರುವ ಶಾಂತಿ ಚಳುವಳಿಯಲ್ಲಿ ಭಾಗವಹಿಸಲು ಕರೆ ನೀಡಿದರು. ಭಾರತ ದೇಶದ ಸುತ್ತಮುತ್ತ ಯುದ್ಧದ ವಾತಾವರಣವನ್ನುಂಟು ಮಾಡುವುದನ್ನು ಖಂಡಿಸಿದ ಭಾಷಣಕಾರರು, ಅಮೇರಿಕನ್ ಸಾಮ್ರಾಜ್ಯಶಾಹಿಯು

(8ನೇ ಪುಟ ನೋಡಿ)

ಮೈಸೂರು :

ಜಿಲ್ಲಾ ಸಿ. ಐ. ಟಿ. ಯು. ಪ್ರಥಮ ಸಮ್ಮೇಳನ

ಕಾರ್ಮಿಕ ವರ್ಗದ ಹೋರಾಟದ ದೊಡ್ಡ ಚರಿತ್ರೆಯನ್ನೇ ಬರೆದಿರುವ ಮೈಸೂರು ನಗರದಲ್ಲಿ ಸಿ.ಐ.ಟಿ.ಯು. ತನ್ನ ಮೊದಲ ಜಿಲ್ಲಾ ಸಮ್ಮೇಳನವನ್ನು 26-9-1982 ರಂದು ಅತ್ಯಂತ ಯಶಸ್ವಿಯಾಗಿ ನಡೆಸಿತು. ಪುರಸಭಾ ಕಾರ್ಮಿಕರು, ಹೋಟೆಲ್ ಕಾರ್ಮಿಕರು, ವಿವಿಧ ಕೈಗಾರಿಕಾ ಘಟಕಗಳ ಕಾರ್ಮಿಕರು ಲಾರಿ ಮತ್ತಿತರೆ ವಿಭಾಗದ ಕಾರ್ಮಿಕರು ಹೀಗೆ ವಿಶಾಲ ತಳಹದಿಯಲ್ಲಿ ಕಾರ್ಮಿಕರು ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟಿಸಲ್ಪಟ್ಟಿದ್ದು ಮೈಸೂರು ನಗರದಲ್ಲಿ ಬಲಿಷ್ಠ ಸಂಘಟನೆಯಾಗಿ ರೂಪುಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಈ ಮೊದಲ ಸಮ್ಮೇಳನ ಸ್ಫೂರ್ತಿದಾಯಕವಾಗಿತ್ತು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷರಾದ ಕಾಂ| ಸೂರ್ಯನಾರಾಯಣರಾವ್‌ರವರು 'ಉತ್ಪಾದನಾ ವರ್ಷದ' ಹೆಸರಿನಲ್ಲಿ ಕಾರ್ಮಿಕ ವಿರೋಧಿ ಕರಾಳ ಮಸೂದೆಗಳನ್ನು ಜಾರಿಗೆ ತಂದು ಕಾರ್ಮಿಕ ಹೋರಾಟದ ಮೂಲಭೂತ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿರುವ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ಸಿನ ನೀತಿಯ ವಿರುದ್ಧ ಸಂಘಟಿತ ಹೋರಾಟ ನಡೆಸುವಂತೆ ಕಾರ್ಮಿಕರಿಗೆ ಕರೆ ನೀಡಿದರು. ಪ್ರಪಂಚದಾದ್ಯಂತ ಸಾಮ್ರಾಜ್ಯಶಾಹಿಗಳ ಯುದ್ಧಕೋರ ನೀತಿಯ ವಿರುದ್ಧ ಪ್ರಬಲವಾದ ಜನ ಹೋರಾಟ ಮೂಡಿ ಬರುತ್ತಿರುವುದನ್ನು ವಿವರಿಸಿದ ಅವರು ಭಾರತದ ಕಾರ್ಮಿಕರೂ ಶಾಂತಿಗಾಗಿ ಹೋರಾಡುವುದರಲ್ಲಿ ಹಿಂದುಳಿಯಬಾರದೆಂದು ಮನವಿ ಮಾಡಿದರು. ಆರ್ಥಿಕ ಬೇಡಿಕೆಗಳಿಗಾಗಿ ಹೋರಾಡುವುದರೊಂದಿಗೆ ರಾಜಕೀಯವಾಗಿಯೂ ಕಾರ್ಮಿಕರು ಪ್ರಜ್ಞಾವಂತರಾದಾಗ ಮಾತ್ರ ಅವರ ವಿಮೋಚನೆ ಸಾಧ್ಯವೆಂದು ಕಾಂ| ಸೂರಿ ಹೇಳಿದರು.

ಬಿಹಾರ ಪತ್ರಿಕಾ ಮಸೂದೆಯನ್ನು ಖಂಡಿಸುವ, ಮುಳವಳ್ಳಿ ಗೋಲಿಬಾರನ್ನು ಖಂಡಿಸುವ, ರಾಜ್ಯದಾದ್ಯಂತ ತೀವ್ರ ಬರಗಾಲ ಪರಿಸ್ಥಿತಿ ಇರುವಾಗ ವಿಶ್ವ ಕನ್ನಡ ಸಮ್ಮೇಳನ ಮತ್ತು ದಸರಾ ಹಬ್ಬದ ಹೆಸರಿನಲ್ಲಿ ದುಂದು ವೆಚ್ಚ ಮಾಡಲು ಹೊರಟಿರುವ ಸರಕಾರದ ನೀತಿಯನ್ನು ವಿರೋಧಿಸುವ, ಅಗತ್ಯ ಸೇವಾ ಕಾಯಿದೆ, ರಾಷ್ಟ್ರೀಯ ಭದ್ರತಾ ಕಾಯಿದೆಗಳಂತಹ ಕರಾಳ ಕಾಯಿದೆಗಳನ್ನು ರದ್ದು ಪಡಿಸಲು ಒತ್ತಾಯಿಸುವ, ಇಸ್ರೇಲಿಗಳಿಂದ ಬೈರೂತ್‌ನಲ್ಲಿ ನಡೆದ ಪ್ಯಾಲೆಸ್ಟೈನ್ ನಿರಾಶ್ರಿತರ ನರಮೇಧವನ್ನು ಖಂಡಿಸುವ ಇವೇ ಮೊದಲಾದ ನಿರ್ಣಯಗಳನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು.

ಧ್ವಜಾರೋಹಣ ಮಾಡಿದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಕಾಂ| ಎಂ. ಎಸ್. ಉಗ್ರಪ್ಪನವರು ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಸಮ್ಮೇಳನದ ಅಂಗವಾಗಿ ಪ್ರಕಟಿಸಲಾದ "ಯುದ್ಧ ಬೇಡ, ಶಾಂತಿ ಬೇಕು" ವಿಶೇಷ ಸ್ಮರಣ ಸಂಚಿಕೆಯನ್ನು ಕಾಂ| ಸೂರ್ಯನಾರಾಯಣರಾವ್‌ರವರು ಬಿಡುಗಡೆ ಮಾಡಿದರು. ಕಾಂ| ಮೋಹನ್ ಕುಮಾರ್ ಮಂಡಿಸಿದ ಚಟುವಟಿಕಾ ವರದಿಯು ಚರ್ಚೆಯ ನಂತರ ಅಂಗೀಕರಿಸಲ್ಪಟ್ಟಿತು.

ಕಾಂ| ಬಿ. ಟಿ. ರಣದಿವೆ, ಕಾಂ| ನೃಪೇನ್ ಚಕ್ರವರ್ತಿ, ಕಾಂ| ರಾಮಮೂರ್ತಿ, ಕಾಂ| ಸಮರ್ ಮುಖರ್ಜಿ, ಕಾಂ| ಸಿ. ನಂಜುಂಡಪ್ಪ ಮೊದಲಾದ ಸಿ.ಐ.ಟಿ.ಯು. ಪ್ರಮುಖರು ಮತ್ತಿತರ ಸಾಮೂಹಿಕ ಸಂಘಟನೆಗಳ ಮುಖಂಡರುಗಳು ಸಮ್ಮೇಳನಕ್ಕೆ ಶುಭ ಕೋರಿ ಸಂದೇಶಗಳನ್ನು ಕಳುಹಿಸಿದ್ದರು.

ಸಮ್ಮೇಳನದ ಕೊನೆಯ ಅಂಗವಾಗಿ ಮೈಸೂರು ನಗರದ ಮುಖ್ಯ ಬೀದಿಗಳಲ್ಲಿ ಸಿ.ಐ.ಟಿ.ಯು.ಗೆ ಸೇರಿದ ಸಂಘಗಳ ಕಾರ್ಮಿಕರು ಮೆರವಣಿಗೆ ನಡೆಸಿ ಪುರಭವನದ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಸಲಾಯಿತು. ಕಾಂ| ಸೂರ್ಯನಾರಾಯಣರಾವ್, ಕಾಂ| ಮೋಹನ್ ಕುಮಾರ್‌ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾಂ| ಎಂ. ಎಸ್. ಉಗ್ರಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನವು ಈ ಕೆಳಗಿನ ನೂತನ ಸಮಿತಿಯನ್ನು ಜಿಲ್ಲಾ ಮಟ್ಟದಲ್ಲಿ ಆಯ್ಕೆ ಮಾಡಿತು :

ಎಂ.ಎಸ್. ಉಗ್ರಪ್ಪ (ಅಧ್ಯಕ್ಷರು), ಜಿ. ರಾಜೇಂದ್ರ (ಉಪಾಧ್ಯಕ್ಷರು), ಮೋಹನ್‌ಕುಮಾರ್ (ಕಾರ್ಯದರ್ಶಿ), ಸಿ. ಕೆ. ಮೋ[illegible] (ಸಹಕಾರ್ಯದರ್ಶಿ), ತಿರುಮಲಾಚಾ[illegible] (ಖಜಾಂಚಿ), ಮತ್ತು ರಾಮಚಂ[illegible], ಕೃಷ್ಣ, ಸುಬ್ರಮಣಿ, ಚಿಕ್ಕಮಾರಯ್ಯ, ರಘುರಾಮ್, ಪುಟ್ಟಣ್ಣ, ವೆಂಕಟೇಶ್, ಜವಪ್ಪ, ಮಹಾಲಕ್ಷ್ಮೀ ಸಮಿತಿ ಸದಸ್ಯರು.

ವರದಿ : ಕುಮಾರ್ ಕುಂದಾಪುರ.

ಇಲ್ಲೊಂದು ತ್ರಿಶಂಕು ಸ್ವರ್ಗ

ತೆಲುಗಿನಲ್ಲೊಂದು ಗಾದೆಯಿದೆ. ಎಲ್ಲಿ ಮಾನ ಎಂದರೂ ಅಲೆಮನೆಯಲ್ಲಿ ಮಾನ ಎನ್ನಬೇಡ ಎನ್ನುವುದು ಅದರ ಕನ್ನಡ ಅರ್ಥ. ಈ ಅರ್ಥ ಶಿಡ್ಲಘಟ್ಟ ಪಟ್ಟಣದ ಉತ್ತರಕ್ಕಿರುವ ಕಾರ್ಮಿಕ ನಗರಕ್ಕೂ ಅನ್ವಯಿಸುತ್ತದೆ. ಪುರಸಭಾ ಚುನಾವಣೆಗಳಲ್ಲಿ ಮತ ನೀಡುವಾಗ ಈ ಉಪನಗರದ ಜನತೆ ಸ್ವಂತ ಮಕ್ಕಳು, ಸೌಲಭ್ಯಗಳ ವಿಚಾರ ಬಂದಾಗ ಇವರು ಸವತಿ ಮಕ್ಕಳು. ಪುರಸಭಾ ಮತದಾರರ ಪಟ್ಟಿಯಲ್ಲಿ ಈ ಉಪನಗರ 4ನೇ ವಿಭಾಗವೆಂದು ನಮೂದಿಸಲಾಗಿದೆ. ಎಲ್ಲಾ ಅಲ್ಪ ಸಂಖ್ಯಾತರೇ ಇದ್ದು ಮುಸ್ಲಿಂ ಬಂಧುಗಳೇ ಬಹು ಸಂಖ್ಯೆಯಲ್ಲಿರುವರು. ಈ ಕಾಲೋನಿಯಲ್ಲಿ ಸುಮಾರು 750 ಮನೆಗಳಿವೆ. ಇವರಿಗೆಲ್ಲಾ ಕುಡಿಯುವ ನೀರು ಇಲ್ಲವೇ ಇಲ್ಲ. ಬೀದಿ ದೀಪದ ಮಾತಿರಲಿ. ನಡೆಯಲು ರಸ್ತೆಗಳೇ ಇಲ್ಲ. ಅಂತೂ ಶಿಡ್ಲಘಟ್ಟ ಪುರಸಭೆಯವರು ಇಂತಹದೊಂದು ಕಾಲೋನಿ ಇದೆ ಎಂಬುದನ್ನೇ ಮರೆತು ಸ್ವಸ್ಥವಾಗಿದ್ದಾರೆ. ಇಲ್ಲಿಂದ ಮತಪಡೆದು ಚುನಾಯಿತರಾದ ಕೌನ್ಸಿಲರುಗಳು ಇನ್ನೊಂದು ಬಾರಿ ಮತ ಯಾಚಿಸಲು ಇಲ್ಲಿಗೆ ಹೋಗಬೇಕಾದರೆ ಪೋಲೀಸರ ಕಾವಲಿನಲ್ಲಿ ಹೋಗುವುದು ಒಳ್ಳೆಯದು. ಈ ವಿಸ್ತೀರ್ಣವನ್ನು ಪುರಸಭಾ ವ್ಯಾಪ್ತಿಗೆ ಸೇರಿಸಿಕೊಳ್ಳಬೇಕೆಂದು ಸರ್ಕಾರಕ್ಕೆ ಇಲ್ಲಿಯ ಜನತೆ ಅರ್ಜಿ ಸಲ್ಲಿಸಿದ ಮೇಲೆ ಜಿಲ್ಲಾಧಿಕಾರಿಗಳು ದಿನಾಂಕ 22-7-77 ರಂದೇ ಪುರಸಭೆಗೆ ನಿರ್ದೇಶನ ನೀಡಿದ್ದರೂ ಸಹಾ ಇದುವರೆಗೆ ಈ ಆಜ್ಞೆಗೆ ಕವಡೆಯ ಕಿಮ್ಮತ್ತು ಸಹಾ ಸಿಕ್ಕಿಲ್ಲದಿರುವುದು ಪುರಸಭೆಯ ಅಹಂಕಾರದ ಧೋರಣೆಗೆ ಒಂದು ದ್ಯೋತಕ. 1971 ರಲ್ಲಿಯೇ ಕಂದಾಯ ಇಲಾಖೆಗೆ ಸೇರಿದ ಖರಾಬ್ ಜಮೀನಿನಲ್ಲಿ ಕಟ್ಟಿಕೊಂಡಿರುವ ಮನೆಗಳನ್ನು ಪುರಸಭಾ ವ್ಯಾಪ್ತಿಗೆ ಸೇರಿಸಿಕೊಳ್ಳಬಹುದೆಂದು ಪಟ್ಟಣ ಯೋಜನಾ ನಿರ್ದೇಶಕರು ಅನುಮತಿ ನೀಡಿದ್ದರೂ ಸಹ ಇದುವರೆಗೆ ಕಾರ್ಯಗತವಾಗಿಲ್ಲ. ಇದೇ ವಿಸ್ತರಣದಲ್ಲಿ ವಾಸಿಸುತ್ತಿರುವ ಶ್ರೀ ದೊರೆಸ್ವಾಮಿಯವರು ಈ ವರದಿಗಾರನಿಗೆ ಈ ವಿಸ್ತರಣವನ್ನೆಲ್ಲಾ ತೋರಿಸಿ ಅವರ ಕಷ್ಟ ಸುಖಗಳನ್ನು ವರ್ಣಿಸಿದರು. ಅಂತೂ ಮುಸ್ಲಿಮರೇ ಹೆಚ್ಚಾಗಿರುವ ಈ ವಿಸ್ತರ್ಣಕ್ಕೆ ಸರ್ವ ಅನುಕೂಲಗಳನ್ನು ಕಲ್ಪಿಸಿಕೊಡಬೇಕಾದದ್ದು ಮುಸ್ಲಿಮರೇ ಆಗಿರುವ ಪುರಸಭಾಧ್ಯಕ್ಷರ ಕರ್ತವ್ಯ.

ವರದಿ : ಗ. ಮು. ರಾ.
('ಕನ್ನಡ' ಕೃಪೆಯ[illegible])

ಐಕ್ಯರಂಗ ಚಂದಾ ವಿವರ

ವಾರ್ಷಿಕ ಚಂದಾ	30 ರೂ.
ಅರ್ಧ ವಾರ್ಷಿಕ ಚಂದಾ	15 ರೂ.

ಸರಕಾರದ ಕಾರ್ಮಿಕ ನೀತಿ ವಿರುದ್ಧ ಪ್ರತಿಭಟನೆ

ಬಿಜಾಪುರ:

ಕಾರ್ಮಿಕ ಸಂಘಗಳ ರಾಷ್ಟ್ರೀಯ ಚಳವಳಿ ಸಮಿತಿಯ ಆದೇಶದಂತೆ ಸೆಪ್ಟಂಬರ್ 18ರಂದು ಬಿಜಾಪುರದಲ್ಲಿ ಜಿಲ್ಲಾ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಪರವಾಗಿ, ರೈಲ್ವೆ, ಎಲ್. ಐ. ಸಿ., ಬ್ಯಾಂಕ್, ನಗರಸಭೆ, ನೂಲಿನ ಗಿರಣಿ ಪೋಸ್ಟ್, ಪಿ ಡಬ್ಲ್ಯೂ ಡಿ. ಸರಕಾರಿ ನೌಕರರು ಮೊದಲಾದ ಸಂಘಗಳ ಪ್ರತಿನಿಧಿಗಳು ಮೆರವಣಿಗೆಯಲ್ಲಿ ಹೋಗಿ ಜಿಲ್ಲಾಧಿಕಾರಿಗಳಿಗೆ ಪ್ರತಿಭಟನಾ ಮನವಿ ಸಲ್ಲಿಸಿದರು.

ಮನವಿಯಲ್ಲಿ ಕೇಂದ್ರ ಸರಕಾರದ ಕಾರ್ಮಿಕ ನೀತಿಯನ್ನು ಬಲವಾಗಿ ಖಂಡಿಸಿದಲ್ಲದೆ, ತ್ರಿಪಕ್ಷೀಯ ಸಮ್ಮೇಳನವನ್ನು ಎಲ್ಲ ಕೇಂದ್ರ ಕಾರ್ಮಿಕ ಸಂಘಗಳು ಬಹಿಷ್ಕರಿಸುವುದನ್ನು ಸ್ವಾಗತಿಸಲಾಗಿದೆ. ಎಸ್. ಕೆ. ಉಪಾಧ್ಯಾಯ, (ಸಿ. ಐ. ಟಿ. ಯು.), ಚಂಚಲಕರ (ಎ ಐ ಟಿ.ಯು.ಸಿ.) ರಜಪೂತ್ (ರೈಲ್ವೆ), ಸೊನ್ನದ (ನಗರಸಭೆ) ಮೊದಲಾದ ಕಾರ್ಮಿಕರ ಮುಖಂಡರು ಮನವಿಯನ್ನರ್ಪಿಸಿದರು.

ಸಕಲೇಶಪುರ:

ಎಸ್. ಸಿ. ಸಿ. ಯ ಕರೆಯ ಮೇರೆಗೆ ಕರ್ನಾಟಕ ತೋಟ ಕಾರ್ಮಿಕರ ಸಂಘ [ಸಿ.ಐ.ಟಿ.ಯು.]ದ ಆಶ್ರಯದಲ್ಲಿ 17-9-82ರಂದು ಕಾರ್ಮಿಕರು ಮತಪ್ರದರ್ಶನ ನಡೆಸಿದರು. ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸುವ ಘೋಷಣೆಗಳೊಂದಿಗೆ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯ ನೇತೃತ್ವವನ್ನು ಕಾಂ| ದೂಜ ವಹಿಸಿದ್ದರು.

ಮೆರವಣಿಗೆಯ ನಂತರ ಸಂಘದ ಕಛೇರಿಯ ಮುಂದೆ ನಡೆದ ಸಭೆಯನ್ನುದ್ದೇಶಿಸಿ ಕಾಂ| ಪಾಲ್ ಡಿಸೋಜರವರು ಮಾತನಾಡಿ ಸರಕಾರವು ಹಂತ ಹಂತವಾಗಿ ದೇಶದ ಕಾರ್ಮಿಕ ವರ್ಗದ ಸಂಘಟನಾ ಹಕ್ಕುಗಳನ್ನು ಕಿತ್ತುಕೊಳ್ಳಲು ಯತ್ನಿಸುವುದನ್ನು ಖಂಡಿಸಿದರು. ಸಂಘಟನಾ ಹಕ್ಕುಗಳನ್ನು ಉಳಿಸಿಕೊಳ್ಳಲು ಕಾರ್ಮಿಕ ವರ್ಗ ವಿಶಾಲ ಪ್ರಮಾಣದ ಐಕ್ಯ ಹೋರಾಟ ನಡೆಸಲು ಮುಂದಾಗಬೇಕೆಂದು ಕರೆನೀಡಿದರು.

ತೊಕ್ಕೊಟು :

17-9-82 ರಂದು ಇಲ್ಲಿನ ಸಿ. ಐ. ಟಿ.ಯು. ಸಮಿತಿಯ ಆಶ್ರಯದಲ್ಲಿ, ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಪ್ರತಿಭಟನಾ ಸಾರ್ವಜನಿಕ ಸಭೆ ನಡೆಯಿತು. ಕಾಂ| ಸುಕುಮಾರ್ ಅವರು ಅಧ್ಯಕ್ಷತೆ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ದ. ಕ. ಜಿಲ್ಲಾ ಬೀಡಿ ಫೆಡರೇಷನ್ನಿನ ಕಾರ್ಯದರ್ಶಿ ಕಾಂ| ಯು. ಬಿ. ಲೋಕಯ್ಯನವರು ಮಾತನಾಡಿ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು. ಕಾನೂನಿನ ವಿವಿಧ ಅಂಶಗಳನ್ನು ತಿದ್ದುವ ಮೂಲಕ ಕಾರ್ಮಿಕ ಚಳುವಳಿಗಳನ್ನು ಹತ್ತಿಕ್ಕುವುದು ಸರಕಾರದ ದುರಾಲೋಚನೆಯಾಗಿದೆ. ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ಅಖಿಲ ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ| ಜೆ. ಬಾಲಕೃಷ್ಣ ಶೆಟ್ಟಿಯವರು ಮಾತನಾಡಿ ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವ ಸರಕಾರದ ಕ್ರಮಗಳನ್ನು ಖಂಡಿಸಿದರು.

ಹೊಳೆನರಸೀಪುರ ಗೋಲೀಬಾರಿನ ಖಂಡನೆ

ಹಾಸನ ಜಿಲ್ಲೆಯ ಹೊಳೆನರಸೀಪುರದ ಸಮೀಪದ ದೊಡ್ಡಹಳ್ಳಿಯಲ್ಲಿ ಪೋಲೀಸ್ ಗೋಲೀಬಾರ್ ನಡೆಸಿ ಎರಡು ಜನ ನಿರಪರಾಧಿಗಳ ಜೀವವನ್ನು ಬಲಿ ತೆಗೆದುಕೊಂಡು, ಹಲವಾರು ಮಂದಿಯನ್ನು ಗಾಯಗೊಳಿಸಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಸೆಕ್ರೆಟೇರಿಯಟ್ ಅತ್ಯುಗ್ರವಾಗಿ ಖಂಡಿಸಿದೆ. ಊರಿನ ಮತ್ತು ಆಸುಪಾಸಿನ ಜನತೆಯ ವಿರೋಧವಿದ್ದಾಗ್ಯೂ, ಗೃಹ ಖಾತೆಯು ಕಾರ್ಯಕ್ರಮವನ್ನು ರದ್ದುಗೊಳಿಸಲು ಸೂಚಿಸಿದ್ದರೂ ಕಾಂಗ್ರೆಸ್ ಮುಖಂಡರುಗಳು ಮತ್ತು ಮಂತ್ರಿ ಶ್ರೀಕಂಠಯ್ಯನವರು ಹಠಮಾರಿತನದಿಂದ ಸಮಾರಂಭವನ್ನು ನಡೆಸಿದ್ದರಿಂದಲೇ ಈ ಅನಾಹುತವಾಯ್ತು. ಜಾಗರೂಕತೆಯಿಂದ ವರ್ತಿಸಿ, ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಬದಲು ಪೋಲೀಸರು ದಬ್ಬಾಳಿಕೆಯ ಕ್ರಮವನ್ನು ಅನುಸರಿಸಿರುವುದು ಖಂಡನೀಯ.

ಮಲಪ್ರಭಾ ರೈತರ ಚಳುವಳಿಯಿಂದ ಮೊದಲ್ಗೊಂಡು ಇತ್ತೀಚೆಗೆ ಮುಳವಳ್ಳಿ ಪೋಲೀಸ್ ಗೋಲೀಬಾರ್ ಮತ್ತು ಇದೀಗ ಹೊಳೆನರಸೀಪುರದಲ್ಲಿನ ಘಟನೆಗಳು ಕರ್ನಾಟಕ ರಾಜ್ಯದಲ್ಲಿ ಗುಂಡೂರಾವ್ ನೇತೃತ್ವದ ಕಾಂಗ್ರೆಸ್ ಸರಕಾರವು ಅನುಸರಿಸುತ್ತಾ ಬಂದಿರುವ "ಪೋಲೀಸ್ ರಾಜ್ಯ" ನೀತಿಯ ಫಲವಾಗಿದೆ. ಈ ಕೊಲೆಗಡುಕ ಸರಕಾರವನ್ನು ಇದೇ ರೀತಿಯಲ್ಲಿ ಮುಂದುವರಿಯಲು ಬಿಡಲೇಬಾರದು. ನಿರಪರಾಧಿಗಳ ಜೀವವನ್ನು ಬಲಿತೆಗೆದುಕೊಂಡಿರುವ ಪೋಲೀಸ್ ಗೋಲೀಬಾರ್ ಮತ್ತು ಸರಕಾರದ ನೀತಿಗಳನ್ನು ಉಗ್ರವಾಗಿ ಖಂಡಿಸುವಾಗಲೇ, ರಾಜ್ಯದ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳೂ, ವಿರೋಧ ಪಕ್ಷಗಳೂ ಒಗ್ಗಟ್ಟಾಗಿ "ಕೊಲೆಗಡುಕ ಕಾಂಗ್ರೆಸ್ ಸರಕಾರ"ದ ವಿರುದ್ಧ ಸಂಯುಕ್ತ ಪ್ರತಿಭಟನೆ ನಡೆಸಲು ಸಿ.ಪಿ.ಐ. (ಎಂ) ಕರೆ ನೀಡಿದೆ.

ಹನ್ನೊಂದನೇ ಕಾಂಗ್ರೆಸ್‌ನ ನಂತರದ ಪ್ರಮುಖ ವಿದ್ಯಮಾನಗಳು; ಕೇಂದ್ರ ಸಮಿತಿಯ ವರದಿ

(26-9-82ರ ಸಂಚಿಕೆಯಿಂದ)

ಸಾಮ್ರಾಜ್ಯಶಾಹಿಯೊಳಗಿನ ವೈರುಧ್ಯ

ಸಮಾಜವಾದಿ ರಾಷ್ಟ್ರಗಳ ಮತ್ತು ತೃತೀಯ ಜಗತ್ತಿನ ದೇಶಗಳ ವಿರುದ್ಧ ಸಾಮ್ರಾಜ್ಯಶಾಹಿ ಶಕ್ತಿಗಳು ಹೆಚ್ಚುಕಡಿಮೆ ಒಗ್ಗಟ್ಟಾಗಿದ್ದರೂ, ಅವು ತಮ್ಮ ತಮ್ಮೊಳಗೆ ಅಂತಹ ಒಗ್ಗಟ್ಟು ಹೊಂದಿಲ್ಲ. ಇದನ್ನು ನಮ್ಮ ಹನ್ನೊಂದನೆ ಕಾಂಗ್ರೆಸ್‌ನ ರಾಜಕೀಯ ನಿರ್ಣಯವು ಒತ್ತಿ ಹೇಳಿದೆ. ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳ ಆಳುವ ಕೂಟಗಳೊಳಗಿನ ತಿಕ್ಕಾಟಗಳು ಬೇರೆ ಬೇರೆ ರೀತಿಯಲ್ಲಿ ಹೊರಹೊಮ್ಮುತ್ತಿವೆ. ಇವುಗಳಲ್ಲಿ ಮುಖ್ಯವಾದುದು ಆರ್ಥಿಕ ಪ್ರಶ್ನೆಗಳು.

ಪೋಲೆಂಡಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳಿಗೆ ಸೋವಿಯತ್ ಒಕ್ಕೂಟವನ್ನು ಹೊಣೆಯಾಗಿರಿಸಿ ಅದನ್ನು 'ಶಿಕ್ಷಿಸುವ' ಉದ್ದೇಶದಿಂದ ಅಮೇರಿಕಾವು ರಶಿಯಾದ ಜೊತೆಗಿನ ಎಲ್ಲ ವ್ಯಾಪಾರ ಸಂಬಂಧಗಳ ಮೇಲೆ ನಿಷೇಧ ಹೇರಿತು. ಪಶ್ಚಿಮ ಐರೋಪ್ಯ ರಾಷ್ಟ್ರಗಳು ಸೋವಿಯತ್ ಒಕ್ಕೂಟದ ಜೊತೆಗೆ ಮಾಡಿಕೊಂಡಿರುವ ಗ್ಯಾಸ್ ಪೈಪ್ ಲೈನ್ ಒಪ್ಪಂದದ ಬಗ್ಗೆ ಅಮೇರಿಕಾವು ತೀವ್ರ ಆಕ್ಷೇಪ ವ್ಯಕ್ತಪಡಿಸಿತು. ಹಾಗಿದ್ದರೂ ಪಶ್ಚಿಮ ಜರ್ಮನಿ, ಫ್ರಾನ್ಸ್ ಮತ್ತು ಬ್ರಿಟನ್ ಸಹ ಅಮೇರಿಕಾದ ಈ ನಿರ್ದೇಶನವನ್ನು ಉಲ್ಲಂಘಿಸಿ ರಷ್ಯದೊಡನೆ ತಾವು ಈ ಮೊದಲೇ ಮಾಡಿಕೊಂಡ ಒಪ್ಪಂದಕ್ಕನುಗುಣವಾಗಿ ಮುಂದುವರಿಯುತ್ತಿವೆ.

ಪಶ್ಚಿಮ ಐರೋಪ್ಯ ರಾಷ್ಟ್ರಗಳು ಸೋವಿಯತ್ ಒಕ್ಕೂಟದೊಂದಿಗೆ ಮಾಡಿಕೊಂಡಿರುವ ಗ್ಯಾಸ್ ಪೈಪ್ ಲೈನ್ ಒಪ್ಪಂದದ ಮೇಲೆ ನಿಷೇಧ ಹೇರಬೇಕೆಂದು ಒತ್ತಾಯಿಸುತ್ತಿರುವ ಅಮೇರಿಕಾ ಸ್ವತಃ ತಾನೇ ರಷ್ಯಕ್ಕೆ ಗೋಧಿ ರಫ್ತು ಮಾಡುವ ವಿಚಾರದಲ್ಲಿ ಹಾಕಿಕೊಂಡಿದ್ದ ನಿಯಂತ್ರಣಗಳನ್ನು ಸಡಿಲಗೊಳಿಸಿದೆ. ಇದರರ್ಥ ಏನು ? ಸೋವಿಯತ್ ಒಕ್ಕೂಟಕ್ಕೆ ಗೋಧಿ ರಫ್ತು ಮಾಡುವ ಮೂಲಕ ಅಮೇರಿಕಾದ ಗೋಧಿ ಉತ್ಪಾದನೆ ಮಾಡುವ ಕೃಷಿಕ ವರ್ತುಲಗಳಿಗೆ ದೊರೆಯುವ ಅಪಾರ ಲಾಭವನ್ನು ಅಲ್ಲಗಳೆಯುವುದು ಅಮೇರಿಕಾದ ಆಳುವ ವರ್ತುಲಗಳಿಗೆ ಬೇಕಾಗಿಲ್ಲ. ಆದರೆ ಪಶ್ಚಿಮ ಐರೋಪ್ಯ ರಾಷ್ಟ್ರಗಳಿಗೆ ಮಾತ್ರ ತಮ್ಮ ಆರ್ಥಿಕತೆಯನ್ನು ಬಚಾಯಿಸಿಕೊಳ್ಳುವ ಇಂತಹ ಕ್ರಮಗಳನ್ನು ಮಾತ್ರ ಅಮೇರಿಕಾ ಅಲ್ಲಗಳೆಯುತ್ತಿದೆ.

ಪಶ್ಚಿಮ ಯುರೋಪ್ ರಾಷ್ಟ್ರಗಳ ವರ್ತುಲಗಳ ವಕ್ತಾರರೇ ಹೇಳಿಕೊಂಡಿರುವಂತೆ, ಸೋವಿಯತ್ ಒಕ್ಕೂಟದ ಜೊತೆಗೆ ಅವುಗಳು ಮಾಡಿಕೊಂಡಿರುವ ಗ್ಯಾಸ್ ಪೈಪ್ ಲೈನ್ ಒಪ್ಪಂದದಿಂದಾಗಿ ಐರೋಪ್ಯ ರಾಷ್ಟ್ರಗಳಿಗೆ ಅನಿಲವು ಅಗ್ಗದ ದರದಲ್ಲಿ ದೊರೆಯುವುದೇ ಅಲ್ಲದೆ ಗ್ಯಾಸ್ ಪೈಪ್ ಲೈನಿಗಾಗಿ ಉಪಕರಣಗಳನ್ನೂ, ಬಿಡಿಭಾಗಗಳನ್ನೂ ಉತ್ಪಾದಿಸುವ ಹಲವಾರು ಉದ್ದಿಮೆಗಳನ್ನು ಇದು ಮುಗ್ಗಟ್ಟಿನಿಂದ ಪಾರು ಮಾಡಬಲ್ಲದು. ಹೀಗೆ ಅಮೇರಿಕಾವು ಸೋವಿಯತ್ ಒಕ್ಕೂಟದೆದುರು ಯುದ್ಧದ ನೆಪ ಹೇಳಿ ಅದರ ಮರೆಯಲ್ಲಿ ವಾಸ್ತವವಾಗಿ ಪಶ್ಚಿಮ ಯುರೋಪಿನ ತನಗೆ ಪ್ರತಿ ಸ್ಪರ್ಧಿಗಳಾಗಿರುವ ಗುತ್ತೇದಾರಿ ಗುಂಪುಗಳ ವಿರುದ್ಧ ಸೆಣಸಾಡುತ್ತಿದೆ.

ಇನ್ನೂ ಹಲವಾರು ಕ್ಷೇತ್ರಗಳಲ್ಲಿ ನಾವಿದನ್ನು ಕಾಣಬಹುದು. ಇದೀಗ ಪಶ್ಚಿಮ ಯುರೋಪಿನ ಕೆಲವು ರಾಷ್ಟ್ರಗಳು ಮತ್ತು ಜಪಾನಿನ ವಿರುದ್ಧ ಅಮೇರಿಕಾವು "ಉಕ್ಕಿನ ಯುದ್ಧ"ವೊಂದನ್ನು ನಡೆಸುತ್ತಿದೆ. ಪಶ್ಚಿಮ ಯುರೋಪಿನ ಮತ್ತು ಜಪಾನಿನ ಉಕ್ಕು ಉತ್ಪಾದಿಸುವ ಸಂಸ್ಥೆಗಳಿಂದ ತಾನು ತೀರಾ ನಿಕಟ ಸ್ಪರ್ಧೆಯನ್ನು ಎದುರಿಸುವುದಾಗಿ ಅಮೇರಿಕಾವು ದೂರುತ್ತಿದೆ. ಅದಕ್ಕಾಗಿ ಅಮೇರಿಕಾವು ವಿದೇಶಗಳಿಂದಬಂದ ಮಾಲುಗಳ ಮೇಲೆ ಅಧಿಕ ಸುಂಕವನ್ನು ವಿಧಿಸುತ್ತಿದೆ. ಸಹಜವಾಗಿಯೇ ಜಪಾನ್ ಮತ್ತು ಯುರೋಪಿನ ದೇಶಗಳೂ ಇಂತಹದೇ ರಕ್ಷಣಾ ಕ್ರಮಗಳನ್ನು ಅನುಸರಿಸುತ್ತಿವೆ.

ಇದು ಒಂದು ನಿದರ್ಶನ ಮಾತ್ರ. ಬೇರೆ ಬೇರೆ ಬಂಡವಾಳಶಾಹಿ ರಾಷ್ಟ್ರಗಳಲ್ಲಿನ ಗುತ್ತೇದಾರಿ ಸಂಸ್ಥೆಗಳ ನಡುವೆ ಅತಿರೆಖನೆನಿಸುವಷ್ಟು ಪೈಪೋಟಿ ಬೆಳೆದಂತೆಲ್ಲ ತಮ್ಮ ತಮ್ಮ ಕೈಗಾರಿಕೆಗಳನ್ನು ಇತರ ದೇಶಗಳಲ್ಲಿನ ಪ್ರತಿಸ್ಪರ್ಧಿಗಳಿಂದ ಸಂರಕ್ಷಿಸಿಕೊಳ್ಳಲು ಎಲ್ಲ ದೇಶಗಳೂ ಇಂತಹ "ಸುಂಕ ಯುದ್ಧ" ಸಾರಲೇಬೇಕಾಗುತ್ತದೆ. ಗುತ್ತೇದಾರಿ ಬಣಗಳ ನಡುವೆ ಆರ್ಥಿಕ ಯುದ್ಧ ನಡೆಯುವುದು ಬಂಡವಾಳಶಾಹಿ ಪದ್ಧತಿಯೊಳಗೆ ನಿರ್ಮಿತವಾದ ಒಂದು ವ್ಯವಸ್ಥೆ. ಇದು ಅಣುಯುದ್ಧದ ತಯಾರಿಯ ಜೊತೆಯಲ್ಲೇ ಮುಂದುವರಿಯುತ್ತಿದೆ.

ಕಾರ್ಮಿಕವರ್ಗ ಮತ್ತು ಬಂಡವಾಳಶಾಹಿ :

ಸಾಮ್ರಾಜ್ಯಶಾಹಿ ರಾಷ್ಟ್ರಗಳ ಆಳುವ ವರ್ಗಗಳು ತಮ್ಮ ಆರ್ಥಿಕ ಮುಗ್ಗಟ್ಟಿನ ಹೊರೆಯನ್ನು ದುಡಿಯುವ ವರ್ಗದ ಮೇಲೆ ಹೊರಿಸಲು ಪ್ರಯತ್ನಿಸುತ್ತಿವೆ. ಹಣದುಬ್ಬರ ಮತ್ತು ಕೈಗಾರಿಕಾ ಹಿಂಜರಿತ ಇವೆರಡೂ ಸೇರಿ ಇಂತಹ ರಾಷ್ಟ್ರಗಳಲ್ಲಿ ಕಾರ್ಮಿಕ ವರ್ಗದ ಪಾಲಿಗೆ ಹಿಂದೆಂದೂ ಕಾಣದಷ್ಟು ಆಕ್ರಮಣಗಳನ್ನು ತಂದೊಡ್ಡಿವೆ. ನಿರುದ್ಯೋಗವು ಅಗಾಧ ಪ್ರಮಾಣಕ್ಕೇರಿದೆ. ಅಮೇರಿಕದಲ್ಲಿ ಒಟ್ಟು ದುಡಿಮೆಗಾರರ ಪ್ರತಿಶತ 9.8%ದಷ್ಟು ಅಂದರೆ ಸುಮಾರು ಹತ್ತು ಮಿಲಿಯದಷ್ಟು ನಿರುದ್ಯೋಗಿಗಳಿದ್ದಾರೆ. 1930ರ - ದಶಕದ ಆರ್ಥಿಕ ಕುಸಿತದ ನಂತರ ಇದೇ ಅತ್ಯಧಿಕ ಪ್ರಮಾಣದ ನಿರುದ್ಯೋಗ. ಇಂಗ್ಲೆಂಡಿನಲ್ಲಿ ನಿರುದ್ಯೋಗದ ಪ್ರಮಾಣ ಶೇ.12.7ರಷ್ಟಿದೆ. ಒಟ್ಟು ನಿರುದ್ಯೋಗಿಗಳ ಸಂಖ್ಯೆ ಇಲ್ಲಿ ಮೂರು ಮಿಲಿಯಕ್ಕೂ ಮಿಕ್ಕಿದೆ. ಐರೋಪ್ಯ ಆರ್ಥಿಕ ಸಮುದಾಯ (E. E. C.)ಕ್ಕೆ ಸೇರಿರುವ ಎಲ್ಲ ರಾಷ್ಟ್ರಗಳಲ್ಲಿ ಒಟ್ಟಾಗಿ ನಿರುದ್ಯೋಗದ ಪ್ರಮಾಣ ಪ್ರತಿಶತ 9ರಷ್ಟಿದೆ. ಇದಲ್ಲದೆ ಅಮೇರಿಕಾ ಮತ್ತು ಬ್ರಿಟನ್‌ನ ಸರಕಾರಗಳು ಅನುಸರಿಸುತ್ತಿರುವ ತಥಾಕಥಿತ 'ಮಿತವ್ಯಯ' ಧೋರಣೆಯಿಂದಾಗಿ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುತಿದ್ದ ಮೊತ್ತದಲ್ಲಿ ಗಣನೀಯ ಪ್ರಮಾಣದ ಕಡಿತವುಂಟಾಗಿದೆ. ಇಂತಹ ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಅಲ್ಲಿನ ಕಾರ್ಮಿಕ ವರ್ಗ ಹಲವಾರು ವರ್ಷಗಳ ಹೋರಾಟ ಮತ್ತು ಬಲಿದಾನಗಳ ಮೂಲಕ ಗಳಿಸಿಕೊಂಡಿತ್ತು.

ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳ ಕಾರ್ಮಿಕ ವರ್ಗವು ಈ ಎಲ್ಲ ಆಕ್ರಮಣಗಳ ವಿರುದ್ಧ ಹೋರಾಡದೆ ಸುಮ್ಮನೆ ಕುಳಿತಿಲ್ಲ. ಕಾರ್ಮಿಕರ ಜೀವನಮಟ್ಟದ ಸಂರಕ್ಷಣೆಗಾಗಿಬಂಡವಾಳಶಾಹಿ ಜಗತ್ತಿನ ಎಲ್ಲೆಡೆ ಬೃಹತ್ ಹೋರಾಟಗಳು ನಡೆಯುತ್ತಿವೆ.

ಇಸ್ರೇಲಿ ಆಕ್ರಮಣ :

ಕಳೆದ ಏಳು ತಿಂಗಳಲ್ಲಿ ನಡೆದ ಇನ್ನೊಂದು ಅತ್ಯಂತ ಕಳವಳಕಾರಿ ವಿದ್ಯಮಾನವೆಂದರೆ ಲೆಬನಾನ್‌ನ ಮೇಲೆ ಇಸ್ರೇಲ್ ನಡೆಸಿದ ನಗ್ನ ಆಕ್ರಮಣ. ಅಮೇರಿಕನ್ ಸಾಮ್ರಾಜ್ಯಶಾಹಿಗಳು ಇಸ್ರೇಲ್‌ನ ಆಡಳಿತೆಗೆ ಹೊಚ್ಚಹೊಸ ಶಸ್ತ್ರಾಸ್ತ್ರಗಳನ್ನೂ, ನೆರವನ್ನೂ ನೀಡಿ ಪಶ್ಚಿಮ ಏಷ್ಯದಲ್ಲಿ ಅದು ಆಕ್ರಮಣಗಳನ್ನು ನಡೆಸುವಂತೆ ಉತ್ತೇಜಿಸುತ್ತಿದ್ದಾರೆ. ಇಸ್ರೇಲ್ ಪ. ಏಶಿಯಾದಲ್ಲಿ ತಮಗೆ "ಆಸಕ್ತಿ ಇರುವ ಆಯಕಟ್ಟಿನ ಪ್ರದೇಶ"ವೆಂದೂ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಸಾರಿಕೊಂಡಿದ್ದಾರೆ.

ವಿಶ್ವಸಂಸ್ಥೆಯ ಭದ್ರತಾ ಸಮಿತಿ ಮತ್ತು ಜನರಲ್ ಅಸೆಂಬ್ಲಿಗಳು ಸರ್ವಾನುಮತದಿಂದ ಇಸ್ರೇಲ್ ತನ್ನ ಆಕ್ರಮಣವನ್ನು ನಿಲ್ಲಿಸಿ ಲೆಬನಾನ್‌ನಿಂದ ವಾಪಸಾಗಬೇಕೆಂದು ಆಣತಿಯಿತ್ತಿದ್ದರೂ ಮತ್ತು ಜಗತ್ತಿನಾದ್ಯಂತ ಸಾರ್ವತ್ರಿಕವಾಗಿ ಖಂಡಿಸಲ್ಪಟ್ಟಿದ್ದರೂ, ಇಸ್ರೇಲ್ ಲಜ್ಜೆಯಿಲ್ಲದೆ ಇನ್ನೂ ಆಕ್ರಮಣವನ್ನು ಮುಂದುವರಿಸುತ್ತಿದೆ. ವಿಶ್ವಸಂಸ್ಥೆಯ ಬಹುಸಂಖ್ಯಾತ ಸದಸ್ಯರು ಇಸ್ರೇಲ್ ಆಕ್ರಮಣ ಪ್ರವೃತ್ತಿಯನ್ನು ವಿರೋಧಿಸುತ್ತಿದ್ದಾರೆ. ಅಮೇರಿಕಾದ ಸ್ನೇಹಿತರಾದ ಪ. ಯುರೋಪಿನ ರಾಷ್ಟ್ರಗಳೂ ಅಮೇರಿಕಾದ ನಿಲುಮೆಯ ಬಗ್ಗೆ ಅಸಂತುಷ್ಟಿ ಹೊಂದಿದ್ದಾರೆ. ಹೀಗಿದ್ದರೂ ಅಮೇರಿಕವು ಭದ್ರತಾ ಸಮಿತಿಯಲ್ಲಿ ತನಗಿರುವ ವೀಟೋ ಹಕ್ಕನ್ನು ಬಳಸಿಕೊಂಡು ವಿಶ್ವಸಂಸ್ಥೆಯು ಇಸ್ರೇಲಿ ಆಕ್ರಮಣಕ್ಕೀಡಾದವರ ನೆರವಿಗೆ ಧಾವಿಸುವುದನ್ನು ತಡೆಹಿಡಿದಿದೆ.

ತನ್ನ ವಿಶೇಷ ರಾಯಭಾರಿ ಫಿಲಿಪ್ ಹಬೀಬ್ ಮುಖಾಂತರ ಅಮೇರಿಕವು ಲೆಬನಾನ್, ಪಿ. ಎಲ್. ಓ. ಮತ್ತು ಸಿರಿಯಾಗಳನ್ನು "ಬ್ಲಾಕ್ ಮೇಲ್" ಮಾಡಲು, ಅವು ಇಸ್ರೇಲ್‌ನ ಒತ್ತಾಯಕ್ಕೆ ಮಣಿಯುವಂತೆ ಮಾಡಲೂ ಪ್ರಯತ್ನಿಸುತ್ತಿದೆ. ಪಾಲೆಸ್ಟೈನ್ ಪ್ರಶ್ನೆಗೆ "ಶಾಂತಿಯುತ ಪರಿಹಾರ" ಒದಗಿಸಲು "ಮಾತುಕತೆ"ಗಳನ್ನು ನಡೆಸುವುದರ ಮರೆಯಲ್ಲಿ ಪಿ. ಎಲ್. ಓ.ಗಳನ್ನು ಲೆಬನಾನ್‌ನಿಂದ ಹೊರಹಾಕುವಲ್ಲಿ ಹಬೀಬ್ ಇಸ್ರೇಲಿ ಆಕ್ರಮಣಕಾರರಿಗೆ ನೆರವಾಗಿದ್ದಾರೆ. ಆರಂಭದಿಂದಲೂ, ಆಕ್ರಮಣಕಾರರಿಗೆ ತಮ್ಮ ಯೋಜನೆಯನ್ನು ಕಾರ್ಯಗತಗೊಳಿಸಲು ನೆರವಾಗಬೇಕೆಂಬುದು ಹಬೀಬ್ ರಾಯಭಾರದ ಉದ್ದೇಶವಾಗಿತ್ತು. ಲೆಬನಾನ್‌ನಿಂದ ಪಿ. ಎಲ್. ಓ. ಸೈನಿಕರನ್ನು ಹೊರದಬ್ಬುವುದೇ ಅದರ ಚಿಂತೆಯಾಗಿತ್ತೆ ಹೊರತು ಇಸ್ರೇಲಿ ಆಕ್ರಮಣಕಾರರನ್ನು ಲೆಬನಾನ್‌ನಿಂದ ಹಿಂದಿರುಗಿಸುವುದಲ್ಲ. ಇದೀಗ ಸಿರಿಯಾ ಕೂಡಾ ತನ್ನ ಸೈನ್ಯವನ್ನು ಲೆಬನಾನ್‌ನಿಂದ ಹಿಂತೆಗೆಯಬೇಕೆಂದು ಇಸ್ರೇಲ್ ಹಠ ಹಿಡಿದಿದೆ, ಇನ್ನೂ ವಿಚಿತ್ರವೆಂದರೆ ಲೆಬನಾನಿನ ರಾಷ್ಟ್ರೀಯ ಸೇನೆ ಕೂಡಾ ತಮ್ಮ ರಾಜಧಾನಿ ಬಿಟ್ಟು ತೊಲಗಬೇಕಂತೆ !

ಜಾಗತಿಕ ಅಭಿಪ್ರಾಯವು ಇಸ್ರೇಲಿ ಆಕ್ರಮಣಕ್ಕೆ ಪೂರ್ಣ ವಿರುದ್ಧವಾಗಿದೆ. ಈ ಆಕ್ರಮಣವನ್ನು ಎದುರಿಸಿ ಹೋರಾಡುತ್ತಿರುವ ಪಿ ಎಲ್. ಓ., ಲೆಬನಾನಿನ ರಾಷ್ಟ್ರೀಯ ಸೈನ್ಯ ಮತ್ತು ಸಿರಿಯಾಗಳಿಗೆ ಜಗತ್ತಿನ ಅಪಾರ ಸಹಾನುಭೂತಿಯಿದೆ. ಹಾಗಿದ್ದರೂ ಆಕ್ರಮಣಕ್ಕೀಡಾದ ಜನತೆ ತುಂಬಾ ಕಷ್ಟದ ಪರಿಸ್ಥಿತಿಯನ್ನೆದುರಿಸುತ್ತಿದ್ದಾರೆ. ಪಶ್ಚಿಮ ಏಶಿಯಾದ ಅನೇಕ ಅರಬ್ ರಾಷ್ಟ್ರಗಳ ಪ್ರತಿಗಾಮಿ ಆಳುವ ವರ್ತುಲಗಳು ಸ್ವಾತಂತ್ಯ ಮತ್ತು ರಾಷ್ಟ್ರೀಯ ಸಮಗ್ರತೆಗಾಗಿ ಹೋರಾಡುತ್ತಿರುವವರಿಗೆ ನೆರವು ನೀಡಲು ಮುಂದೆ ಬಂದಿಲ್ಲ.

ನೇರವಾಗಿ ಧಾಳಿಗೆ ತುತ್ತಾಗಿರುವ ಲೆಬನಾನಿನ ಆಳುವ ವರ್ತುಲಗಳಲ್ಲೇ ಇಸ್ರೇಲಿ ಅತಿಕ್ರಮಣದ ವಿರುದ್ಧ ತಮ್ಮ ದೇಶವನ್ನು ರಕ್ಷಿಸಿಕೊಳ್ಳುವ ವಿಷಯದಲ್ಲಿ ಒಮ್ಮತ ಇರಲಿಲ್ಲ. ಇವರಲ್ಲೆ ಒಂದು ವಿಭಾಗ ಈ ಅವಕಾಶವನ್ನು ಬಳಸಿಕೊಂಡು ತಮ್ಮ ವಿರೋಧಿಗಳ ಮೇಲೆ ಸೇಡು ತೀರಿಸುವ ಉದ್ದೇಶದಿಂದ ಇಸ್ರೇಲಿ ಆಕ್ರಮಣಕಾರರೊಂದಿಗೆ ಶಾಮೀಲಾಗಿದೆ. ಈ ಭಿನ್ನಾಭಿಪ್ರಾಯಗಳನ್ನು ಬಳಸಿಕೊಂಡಿರುವ ಇಸ್ರೇಲ್-ಅಮೇರಿಕಾ ಕೂಟವು ರಾಷ್ಟ್ರೀಯವಾದಿ ಶಕ್ತಿಗಳ ವಿರೋಧವನ್ನೂ ಕಡೆಗಣಿಸಿ ತನ್ನೊಬ್ಬ ಫಲಾಂಗಿಸ್ಟ್ ಕೈಗೊಂಬೆಯನ್ನು ಲೆಬನಾನಿನ ಅಧ್ಯಕ್ಷನನ್ನಾಗಿ ಆ ದೇಶದ ಮೇಲೆ ಹೇರಿದೆ. ಹೀಗಾಗಿ ಲೆಬನಾನ್ ಮತ್ತೊಮ್ಮೆ ಅಂತರ್ಯುದ್ಧದ ಸುಳಿಯಲ್ಲಿ ಸಿಲುಕಿಕೊಂಡಂತಾಗಿದೆ, ಇದು ಪಶ್ಚಿಮ ಏಶಿಯಾದಲ್ಲಿ ಇನ್ನೊಂದು ಯುದ್ಧಕ್ಕೆ ಅವಕಾಶ ಮಾಡಿಕೊಡಬಹುದು.

ಇಸ್ರೇಲಿ ಆಕ್ರಮಣದ ವಿರುದ್ಧ ಪ್ಯಾಲೆಸ್ಟೈನ್ ವಿಮೋಚನಾ ಸೈನ್ಯವು ನಡೆಸಿದ ಧೀರೋದಾತ್ತ ಹೋರಾಟದಿಂದ ಇನ್ನೂ ಒಂದು ವಿಚಾರ ಸ್ಪಷ್ಟವಾಗಿದೆ. ಇಸ್ರೇಲ್ ತನ್ನ ಆಕ್ರಮಣವನ್ನು ಪ್ರಾರಂಭಿಸಿದಾಗ ಯಾವ ಉದ್ದೇಶವನ್ನು ಹೊಂದಿತ್ತೋ ಅದನ್ನು ಸಾಧಿಸಿಕೊಳ್ಳಲು ಅದಕ್ಕೆ ಸಾಧ್ಯವಾಗಿಲ್ಲ, ಪಿ. ಎಲ್. ಓ ವನ್ನು 'ನಿರ್ನಾಮ' ಮಾಡುವುದು ಇಸ್ರೇಲ್‌ಗೆ ಅಸಾಧ್ಯವಾಗಿದೆ. ಈವರೆಗೆ ಇಸ್ರೇಲ್ ನಡೆಸಿದ, ಆದರೆ ತನ್ನ ಉದ್ದೇಶವನ್ನು ಸಾಧಿಸಿಕೊಳ್ಳಲಾಗದ ಅತ್ಯಂತ ಧೀರ್ಘವಾದ ಹಾಗೂ ಅಪಾರ ವೆಚ್ಚದ ಯುದ್ಧ ಇದೊಂದೇ. ಅರಬರ ವಿರುದ್ಧ ಇಸ್ರೇಲ್ ನಡೆಸಿದ ಯುದ್ಧಗಳ ಇತಿಹಾಸದಲ್ಲೇ ಮೊದಲ ಬಾರಿಗೆ ಪಿ. ಎಲ್. ಓ. ವಿರುದ್ಧ ನಡೆದ ಈ ಯುದ್ಧದಲ್ಲಿ ಇಸ್ರೇಲ್ ಅಪಾರ ಸಂಖ್ಯೆಯ ಸೈನಿಕರನ್ನೂ, ಅಧಿಕಾರಿಗಳನ್ನೂ ಕಳೆದುಕೊಂಡಿದೆ. ಮತ್ತು ಮೊತ್ತ ಮೊದಲಬಾರಿಗೆ ಇಸ್ರೇಲ್‌ನ ಒಳಗೇ ಯುದ್ಧ ವಿರೋಧಿ ಭಾವನೆಗಳು ಬಹಿರಂಗವಾಗಿ ಪ್ರಕಟಗೊಂಡಿವೆ.

ಪಶ್ಚಿಮ ಏಶಿಯಾದ ಸಂಘರ್ಷಕ್ಕೆ ಕೊನೆಯೇನೂ ಕಂಡುಬರುತ್ತಿಲ್ಲ. ಪಶ್ಚಿಮ ಬೇರೂತ್‌ನಲ್ಲಿ ಈಗ ನಡೆಯುತ್ತಿರುವಂತಹ ಯಾವುದೇ ಕಾರ್ಯಾಚರಣೆ ಹೇಗೆಯೇ ಅಂತ್ಯಗೊಂಡರೂ, ಪಾಲೆಸ್ಟೈನ್ ಜನರ ಮಾತೃಭೂಮಿಯಾಗಿ ಪಾಲೆಸ್ಟೈನ್ ರಾಷ್ಟ್ರ ನಿರ್ಮಾಣವಾಗುವವರೆಗೆ ಒಂದು ಸುಸಂಘಟಿತ ರಾಜಕೀಯ-ಸೈನಿಕ ಶಕ್ತಿಯಾಗಿ ಪಿ. ಎಲ್. ಓ. ಉಳಿದುಕೊಳ್ಳುವುದಂತೂ ಖಂಡಿತ. ಅರಬ್ ಜನತೆಯೆದುರು ಅವರ ಆಳುವ ವರ್ಗಗಳು ನಡೆಸಿದ ವಿದ್ರೋಹವನ್ನು ಈ ಯುದ್ಧವು ಸ್ಪಷ್ಟವಾಗಿ ತೋರಿಸಿಕೊಟ್ಟಿದೆಯಲ್ಲದೆ ಆಕ್ರಮಣಕಾರರ ವಿರುದ್ಧ ಅರಬ್ ಜನತೆ ಒಂದಾಗುವುದಕ್ಕೂ ದಾರಿ ಮಾಡಿಕೊಟ್ಟಿದೆ.

ಪಶ್ಚಿಮ ಏಶಿಯಾದ ಸಮರಶೀಲ ವಿಮೋಚನಾ ಚಳುವಳಿಯ ವಿರುದ್ಧ ಜಿಯಾನ್‌ವಾದವನ್ನು ಅಮೇರಿಕನ್ ಸಾಮ್ರಾಜ್ಯಶಾಹಿಗಳ ಗುಲಾಮನಾಗಿ ಬಳಸಿಕೊಳ್ಳುವುದರ ನಿಷ್ಪ್ರಯೋಜಕತೆಯನ್ನು ಅಮೇರಿಕಾದೊಳಗೂ ಇಸ್ರೇಲ್‌ನೊಳಗೂ ಹೆಚ್ಚು ಹೆಚ್ಚು ಜನ ಅರ್ಥ ಮಾಡಿಕೊಳ್ಳುತ್ತಿದ್ದಾರೆ.

ಪಾಲೆಸ್ಟೈನ್ ಹೋರಾಟಗಾರರು ಮತ್ತು ಲೆಬನಾನ್ ಹಾಗೂ ಇತರ ಅರಬ್ ರಾಷ್ಟ್ರಗಳಲ್ಲಿನ ವಿಮೋಚನಾ ಹೋರಾಟಗಾರರೊಂದಿಗೆ ಭಾರತೀಯ

(7ನೇ ಪುಟ ನೋಡಿ)

ರೈತ ಸಂಘದ ಚಟುವಟಿಕೆಗಳು

ರಾಯಚೂರು :

10-9-82 ರಂದು ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಯ ಪ್ರತಿನಿಧಿಗಳು ಜಿಲ್ಲಾಧಿಕಾರಿಯವರನ್ನು ಕಂಡು ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲು ಒತ್ತಾಯಿಸಿ ಮನವಿ ಪತ್ರ ಸಲ್ಲಿಸಿದರು.

ರಾಯಚೂರು ತಾಲ್ಲೂಕಿನ ತುಂಗಭದ್ರಾ ಎಡದಂಡೆ ಕಾಲುವೆಯ ತುದಿಯ ರೈತರ ಸಮಸ್ಯೆಯನ್ನು ಪರಿಹರಿಸುವುದು, ರಾಜಲಬಂಡಾ ಡೈವರ್ಶನ್ ಕಾಲುವೆಯನ್ನು ತೆಗೆದುಕೊಳ್ಳುವುದು, ಕೃಷ್ಣಾ ಮೇಲ್ದಂಡೆ ಯೋಜನೆಯ ಬಲದಂಡೆಯ ಕಾಲುವೆಯನ್ನು ಕೈಗೆತ್ತಿಕೊಳ್ಳುವುದು ಇತ್ಯಾದಿ ಬೇಡಿಕೆಗಳು ಮನವಿ ಪತ್ರದಲ್ಲಿ ಒಳಗೊಂಡಿದ್ದವು.

ಕಾಂ| ಚಂದ್ರಶೇಖರ ಬಾಳೆ, ರಾಮನಗೌಡ, ಬಿ.ಎಸ್. ಪಾಟೀಲ ಮುಂತಾದವರು ನಿಯೋಗದಲ್ಲಿದ್ದರು.

ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೆ ಘೇರಾವ್ :

ರಾಯಚೂರು ತಾಲ್ಲೂಕಿನ ಜಾಲಿಬೆಂಚಿ ಗ್ರಾಮದ ರೈತರ ಸಮಸ್ಯೆಗೆ ಸಂಬಂಧಪಟ್ಟ ಮನವಿ ಪತ್ರವನ್ನು ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೆ ಸಲ್ಲಿಸಲು ತಾಲ್ಲೂಕು ಸಮಿತಿಯ ಸದಸ್ಯ ಕತಾಲ ಸಾಬ್ ಅವರು ಹೋದಾಗ, ಅಧ್ಯಕ್ಷರು ಮನವಿ ಪತ್ರವನ್ನು ಹರಿದೊಗೆದು, ಹೀನಾಮಾನವಾಗಿ ನಿಂದಿಸಿದರು.

ಅಧ್ಯಕ್ಷರ ಕ್ರಮವನ್ನು ಪ್ರತಿಭಟಿಸಿ ನೂರಾರು ರೈತರು ರೈತ ಸಂಘದ ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ತೆರಳಿ ಅಧ್ಯಕ್ಷರನ್ನು ಘೇರಾಯಿಸಿ ಕ್ಷಮೆ ಕೇಳುವಂತೆ ಒತ್ತಾಯಿಸಿದರು.

ನಂತರ ಟಿ. ಡಿ. ಬಿ. ಕಚೇರಿ ಎದುರು ನಡೆದ ಸಭೆಯನ್ನುದ್ದೇಶಿಸಿ ಕಾಂ|ಬಾಳೆ, ಪುರುಷೋತ್ತಮ ಅವರು ಮಾತನಾಡಿ ಟಿ.ಡಿ.ಬಿ ಅಧ್ಯಕ್ಷರ ವರ್ತನೆಯನ್ನು ಖಂಡಿಸಿದರು.

ದೇವದುರ್ಗ :

ದೇವದುರ್ಗ (ರಾಯಚೂರು ಜಿಲ್ಲೆ) ತಾಲ್ಲೂಕನ್ನು ಬರಗಾಲಪೀಡಿತ ಪ್ರದೇಶವೆಂದು ಘೋಷಿಸಲು ಒತ್ತಾಯಿಸಿ 14-9-82 ರಂದು ತಾಲ್ಲೂಕು ಕಚೇರಿ ಎದುರು ಸಾವಿರಾರು ರೈತ-ಕೃಷಿ ಕಾರ್ಮಿಕರು ಧರಣಿ ನಡೆಸಿದರು.

ತಾಲ್ಲೂಕಿನ ವಿವಿಧ ಭಾಗಗಳಿಂದ ಕಾಲ್ನಡಿಗೆಯಲ್ಲಿ ರೈತರು ಈ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಕಾಂ| ಅಮೀರ್ ಜಾನ್ ಹಾಗೂ ಜಾನಪ್ಪ ಅವರು ಈ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಮೆರವಣಿಗೆಯ ನಂತರ ನಡೆದ ಸಭೆಯನ್ನುದ್ದೇಶಿಸಿ ಮಾಜಿ ಶಾಸಕ ಸದಾಶಿವಪ್ಪ ಪಾಟೀಲ, ಚಂದ್ರಶೇಖರ ಬಾಳೆ ಮಾತನಾಡಿದರು. ತಾಲ್ಲೂಕಿನಲ್ಲಿ ತಲೆಯೆತ್ತಿರುವ ಭೀಕರ ಕ್ಷಾಮ ಪರಿಸ್ಥಿತಿಯನ್ನು ವಿವರಿಸಿದ ಕಾಂ| ಬಾಳೆ, ಪರಿಸ್ಥಿತಿಯನ್ನು ಎದುರಿಸುವಲ್ಲಿ ಸರಕಾರ ನಿಷ್ಕ್ರಿಯತೆ ತೋರಿಸುತ್ತಿರುವುದನ್ನು ಖಂಡಿಸಿದರು.

ಈ ಕಾರ್ಯಕ್ರಮದ ಮುನ್ನ ಕಾಂ| ಚಂದ್ರಶೇಖರ್ ಬಾಳೆಯವರ ನೇತೃತ್ವದಲ್ಲಿ ತಾಲ್ಲೂಕಿನ ಹತ್ತು ಹಳ್ಳಿಗಳಿಗೆ ಕಾರ್ಯಕರ್ತರು ತೆರಳಿ ಸಭೆ-ಮೆರವಣಿಗೆಗಳನ್ನು ವ್ಯವಸ್ಥೆಗೊಳಿಸಿ ಜನರಿಗೆ 14-9-82 ರಂದು ತಾಲ್ಲೂಕು ಕೇಂದ್ರದಲ್ಲಿ ನಡೆಯಲಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಲು ಮನವಿ ಮಾಡಿದ್ದರು.

ಮಸರಕಲ್ಲ :

ರಾಯಚೂರು ಜಿಲ್ಲಾ ಮಸರಕಲ್ಲ ಗ್ರಾಮದಲ್ಲಿ ಸೆಪ್ಟೆಂಬರ್ 12 ರಂದು ರೈತ-ಕೃಷಿ ಕಾರ್ಮಿಕರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಪ್ರಾಂತ ರೈತ ಸಂಘದ ಕಾರ್ಯದರ್ಶಿ ಕಾಂ| ಚಂದ್ರಶೇಖರ ಬಾಳೆ ವಹಿಸಿದ್ದರು.

ಕಾಂ| ಬಾಳೆ ಸಭೆಯನ್ನುದ್ದೇಶಿಸಿ ಮಾತನಾಡಿ ರೈತಸಂಘದ ಧ್ಯೇಯೋದ್ದೇಶಗಳನ್ನು ವಿವರಿಸಿದರು. ನಂತರ ಮಸರಕಲ್ಲ ಗ್ರಾಮದಲ್ಲಿ ರೈತ ಸಂಘದ ಘಟಕವೊಂದನ್ನು ರಚಿಸಲಾಯಿತು. ಪದಾಧಿಕಾರಿಗಳು ಇಂತಿದ್ದಾರೆ :

ಅಧ್ಯಕ್ಷರಾಗಿ ರಾಜಶೇಖರ ಬಾಳೆ, ಉಪಾಧ್ಯಕ್ಷರುಗಳಾಗಿ ಅಮೀರ್ ಜಾನ್, ಉಮಾಪತಿ ಮೇಟಿ ಮತ್ತು ಅಯ್ಯಣ್ಣ ಸ್ವಾಮಿ, ಪ್ರಧಾನ ಕಾರ್ಯದರ್ಶಿಯಾಗಿ ಗಫೂರ್ ಸಾಬ್, ಸಹ ಕಾರ್ಯದರ್ಶಿಗಳಾಗಿ ಮಲ್ಲಿಕಾರ್ಜುನ ಹೂಗಾರ, ರಾಮಣ್ಣ ಮತ್ತು ಜಾನಪ್ಪ, ಖಜಾಂಚಿಯಾಗಿ ಬನ್ನಪ್ಪ ಬಾಳೆ.

ತೆಗ್ಗಾಳ :

ದೇವದುರ್ಗ ತಾಲ್ಲೂಕಿನ ತೆಗ್ಗಾಳ ಗ್ರಾಮದಲ್ಲಿ ರೈತ ಸಂಘದ ಘಟಕವೊಂದನ್ನು ರಚಿಸಲಾಯಿತು. ಈ ಕುರಿತು ಸೆಪ್ಟೆಂಬರ್ 13 ರಂದು ಸಭೆ ನಡೆದು, ಸಭೆಯ ಅಧ್ಯಕ್ಷತೆಯನ್ನು ಕಾಂ| ಬಾಳೆ ವಹಿಸಿದ್ದರು.

ನೂತನ ಘಟಕದ ಪದಾಧಿಕಾರಿಗಳು ಇಂತಿದ್ದಾರೆ : ಅಧ್ಯಕ್ಷರಾಗಿ ಸೋಮನಾಥಗೌಡ, ಉಪಾಧ್ಯಕ್ಷರಾಗಿ ಸಣ್ಣಯಂಕಣ್ಣ, ಕಾರ್ಯದರ್ಶಿಯಾಗಿ ಮಲ್ಲಿಕಾರ್ಜುನಗೌಡ.

ಕೊನೆಯಲ್ಲಿ ಟಿ. ಡಿ. ಬಿ. ಸದಸ್ಯ ಅಮೀರ್ ಖಾನ್ ವಂದನೆ ಸಲ್ಲಿಸಿದರು.

ಕುಡ್ಲೂರು :

ರಾಯಚೂರು ತಾಲ್ಲೂಕಿನ ಕುಡ್ಲೂರು ಗ್ರಾಮದಲ್ಲಿ ರೈತ ಸಂಘದ ನೂತನ ಘಟಕವೊಂದನ್ನು ರಚಿಸಲಾಯಿತು. ಈ ಕುರಿತು 19-9-82 ರಂದು ಕುಡ್ಲೂರು ಗ್ರಾಮದಲ್ಲಿ ರೈತ-ಕೃಷಿ ಕಾರ್ಮಿಕರ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಕಾಂ| ಬಾಳೆ ವಹಿಸಿದ್ದರು.

ನೂತನ ಘಟಕದ ಪದಾಧಿಕಾರಿಗಳು ಇಂತಿದ್ದಾರೆ : ಅಧ್ಯಕ್ಷರಾಗಿ ಸಿದ್ಧಲಿಂಗಪ್ಪಗೌಡ, ಕಾರ್ಯದರ್ಶಿಯಾಗಿ ಶರಣಪ್ಪ, ಸಹ ಕಾರ್ಯದರ್ಶಿಯಾಗಿ ರಾಘವೇಂದ್ರರಾವ್.

ಕೊನೆಯಲ್ಲಿ ಸಿದ್ಧಲಿಂಗಪ್ಪ ಗೌಡರು ವಂದಿಸಿದರು.

ಸವದತ್ತಿ :

ಬರಗಾಲ ಪೀಡಿತ ಪ್ರದೇಶವೆಂದು ಸಾರಲು ಒತ್ತಾಯ

ಸವದತ್ತಿ ತಾಲ್ಲೂಕಿನ ಸ್ವಲ್ಪವೇ ಭಾಗ ನೀರಾವರಿಯಾಗಿದ್ದು, ಉಳಿದ ಪ್ರದೇಶದ ರೈತರು ತಮ್ಮ ಕೃಷಿಗೆ ಮಳೆಯನ್ನೇ ಅವಲಂಬಿಸಿದ್ದಾರೆ. ಈ ಸಲ ಮುಂಗಾರಿ ಮಳೆಬಾರದೇ ರೈತರು ಕಂಗೆಟ್ಟಿದ್ದಾರೆ. ಒಣಬೇಸಾಯದ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಬೇಕೆಂದು ಸೆಪ್ಟೆಂಬರ್ 20 ರಂದು ಸವದತ್ತಿಯಲ್ಲಿ ನಡೆದ ರೈತರ ಸಭೆಯಲ್ಲಿ ಒತ್ತಾಯಿಸಲಾಯಿತು.

ಈ ಸಭೆಗೆ 34 ಗ್ರಾಮಗಳಿಂದ 162 ಪ್ರತಿನಿಧಿಗಳು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಕಾಂ| ಕಪ್ಪಣ್ಣವರ ವಹಿಸಿದ್ದರು. ಕಾಂ| ಹಳಕಟ್ಟಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ಸವದತ್ತಿ, ನರಗುಂದ, ನವಲಗುಂದ ತಾಲ್ಲೂಕುಗಳು ಹತ್ತಿ ಬೆಳೆಗೆ ಯೋಗ್ಯ ಪ್ರದೇಶವಾದ್ದರಿಂದ ಇಲ್ಲಿ ಹತ್ತಿಯ ಬೆಳೆಯ ಮೇಲಿನ ನಿರ್ಬಂಧವನ್ನು ತೆಗೆದುಹಾಕಿ ಈ ಪ್ರದೇಶವನ್ನು ಹತ್ತಿ ಬೆಳೆಗಾಗಿ ಮೀಸಲಿಡುವಂತೆಯೂ ಒತ್ತಾಯಿಸಲಾಯಿತು.

ಕಾಲುವೆಗಳಿಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಯ ಬಗ್ಗೆ ಪರಿಹಾರ ಹಣ ಬೇಗ ಕೊಡುವಂತೆ, ದೋಷಪೂರ್ಣ ನೀರಾವರಿ ವ್ಯವಸ್ಥೆಯಿಂದ ಕೆಟ್ಟು ಹೋದ ಗ್ರಾಮೀಣ ರಸ್ತೆಗಳನ್ನು ದುರಸ್ತಿ ಮಾಡುವಂತೆ, ಸಂಪರ್ಕ ರಸ್ತೆಗಳೇ ಇಲ್ಲದಿರುವ ಊರುಗಳಿಗೆ ರಸ್ತೆ ಸಂಪರ್ಕ ಕಲ್ಪಿಸುವಂತೆ ಒತ್ತಾಯಿಸಲಾಯಿತು.

ಆರಂಭದಲ್ಲಿ ಸವದತ್ತಿ ಘಟಕದ ಕಾರ್ಯದರ್ಶಿ ನಿತ್ಯಾನಂದ ಸ್ವಾಮಿಜಿಯವರು ಸ್ವಾಗತಿಸಿದರು.

ಕೋಟೆಕಾರ್ ಸರ್ಕಲ್ :

22-9-82 ರಂದು ಕೋಟೆಕಾರ್ ಸರ್ಕಲ್ ರೈತ ಸಂಘದ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಯು. ಪಿ. ಡಿಸೋಜ ಅವರು ವಹಿಸಿದ್ದರು. ಆರಂಭದಲ್ಲಿ ಕಾರ್ಯದರ್ಶಿ ಕಾಂ| ರಾಮಚಂದ್ರ ಉಚ್ಚಿಲ್ ಅವರು ಮಾತನಾಡಿ, ರೈತರ ಮುಂದಿರುವ ಸಮಸ್ಯೆಗಳ ಕುರಿತು, ಸರ್ಕಲ್‌ನಲ್ಲಿ ನಡೆಯಬೇಕಾದ ಅನೇಕ ಕಾರ್ಯಗಳ ಬಗ್ಗೆ ವಿವರಣೆ ನೀಡಿದರು. ಸಭೆಗೆ ಮುಖ್ಯ ಅತಿಥಿಗಳಾಗಿ ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಜನಾರ್ಧನ ನಾಯಕ್ ಆಗಮಿಸಿದ್ದರು.

ನಿರ್ಣಯಗಳು :

ಕರ್ನಾಟಕ ಪ್ರಾಂತ ರೈತ ಸಂಘ ಸರಕಾರಕ್ಕೆ ಸಲ್ಲಿಸಲಿರುವ ಮನವಿಗೆ ಸಾಮೂಹಿಕ ಸಹಿ ಸಂಗ್ರಹದ ಕೆಲಸವನ್ನು ತುರ್ತಾಗಿ ಪೂರ್ತಿಗೊಳಿಸುವುದು, ಉಳ್ಳಾಲ ಹೊಯ್ಗೆ-ಉಳಿಯ ನಡುವಿಗೆ ಇರುವ ಕಿರುನದಿಗೆ ಕಾಲು-ಸಂಕ ರಚಿಸಲು ಒತ್ತಾಯಿಸುವುದು. ಉಳ್ಳಾಲ ಹೊಯ್ಗೆ-ನೇತ್ರಾವತಿ ನದಿಗೆ ಬದಿಯಿರುದ ದಂಡೆಲಿಗೆ ನೆರೆ ನೀರಿನ ಅಪಾಯವನ್ನು ತಡೆಗಟ್ಟಬೇಕು, ಉಳ್ಳಾಲ ನೇತ್ರಾವತಿ ರೈಲ್ವೆ ಸೇತುವೆಯ ಸಾರ್ವಜನಿಕ ದಾರಿಯನ್ನು ದುರಸ್ತಿಗೊಳಿಸಬೇಕು, ಮನೆ ನಿವೇಶನಕ್ಕಾಗಿ ಕೊಟ್ಟಿರುವ ಸಾಲವನ್ನು ಮಾಫೀ ಮಾಡಬೇಕು.... ಇತ್ಯಾದಿ.

ಮಲ್ಲೇನಹಳ್ಳಿ :

ತುಮಕೂರು ಕಸಬಾ ಮಲ್ಲೇನಹಳ್ಳಿಯಲ್ಲಿ 4-10-82 ರಂದು ರೈತ ಮತ್ತು ಕೃಷಿ ಕೂಲಿಗಾರರ ಸಭೆ ನಡೆಯಿತು. ಅಧ್ಯಕ್ಷತೆಯನ್ನು ನಂಜಯ್ಯ ವಹಿಸಿದ್ದರು.

ಆರಂಭದಲ್ಲಿ ಟಿ. ಕೆ. ಗೋವಿಂದ ರಾಜ್ ಸ್ವಾಗತಿಸಿದರು. ಸಭೆಯನ್ನುದ್ದೇಶಿಸಿ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಎಚ್. ಸಿ. ಚನ್ನಪ್ಪ ಮತ್ತು ಕಾಂ| ಕೆ. ಆರ್. ನಾಯಕ್ ಅವರು ಮಾತನಾಡಿ ರೈತ ಸಂಘದ ಧ್ಯೇಯೋದ್ದೇಶ ವಿವರಿಸಿದರು. ಡಿಸೆಂಬರ್‌ನಲ್ಲಿ ವಿಧಾನ ಸೌಧದ ಮುಂದ ನಡೆಯಲಿರುವ ರೈತರ ಮಹ ಪ್ರದರ್ಶನ ಕುರಿತು ವಿವರಣೆ ನೀಡಿ ಈ ಕಾರ್ಯಕ್ರಮದಲ್ಲಿ ಬಹುಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ರೈತರ ಮಹಾ ಮನವಿಗೆ ಸಹಿ ಸಂಗ್ರಹ ಕೆಲಸವನ್ನು ತುರ್ತಾಗಿ ಪೂರೈಸಬೇಕೆಂದು ನಿರ್ಣಯಿಸಲಾಯಿತು. ಮಲ್ಲೇನಹಳ್ಳಿಯ ರೈತ ಕಾರ್ಯಕರ್ತರಾದ ಕಂಬಳಿ ರಾಮಣ್ಣ ಮತ್ತಿತರರು ವಿಶೇಷ ಆಸಕ್ತಿವಹಿಸಿ ಸಭೆ ಯಶಸ್ವಿಯಾಗುವಂತೆ ಶ್ರಮಿಸಿದರು. ಜಿಲ್ಲಾ ರೈತ ಸಂಘದ ಖಜಾಂಚಿ ಟಿ. ಎಲ್. ತಿಮ್ಮಪ್ಪ ಮತ್ತು ಊರುಕೆರೆಯ ರೈತ ಸಂಘದ ಮುಖಂಡರು ಸಭೆಯಲ್ಲಿ ಭಾಗ ವಹಿಸಿದ್ದರು.

ಡಿಸೆಂಬರ್ ೧೩ ರಂದು 'ವಿಧಾನಸೌಧ ಚಲೋ' ಕಾರ್ಯಕ್ರಮ

ಈ ಮೊದಲೇ ನಡೆಯಬೇಕಾಗಿದ್ದ ರೈತ-ಕೃಷಿ ಕಾರ್ಮಿಕರ 'ವಿಧಾನ ಸೌಧ ಚಲೋ' ಕಾರ್ಯಕ್ರಮವನ್ನು ಡಿಸೆಂಬರ್ 13 ರಂದು ವ್ಯವಸ್ಥೆಗೊಳಿಸಿರುವುದಾಗಿ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ವಿ. ಎನ್. ಹಳಕಟ್ಟಿ ತಿಳಿಸಿದ್ದಾರೆ.

ಎಲ್ಲಾ ಘಟಕಗಳೂ ಶ್ರಮವಹಿಸಿ ತುರ್ತಾಗಿ ಮಹಾ ಮನವಿಗೆ ದಶಲಕ್ಷ ಸಹಿ ಸಂಗ್ರಹ ಕಾರ್ಯವನ್ನು ಪೂರ್ತಿಗೊಳಿಸಬೇಕೆಂದೂ ಅವರು ಮನವಿ ಮಾಡಿದ್ದಾರೆ.

ಹರಪನಹಳ್ಳಿ :

ಹರಪನಹಳ್ಳಿ ತಾಲ್ಲೂಕಿನ ದಡಗಾರನಹಳ್ಳಿ ಗ್ರಾಮದಲ್ಲಿ 17-9-82 ರಂದು ರೈತ ಸಂಘದ ಘಟಕವನ್ನು ಪ್ರಾರಂಭಿಸಲಾಯಿತು. ಸಭೆಗೆ ಅತಿಥಿಗಳಾಗಿ ಶೃಂಗಾರ ತೋಟ ಘಟಕದ ಸಂಚಾಲಕ ಬಿ. ಪರಶುರಾಮ, ಕೆ. ಕಾಸೀಮ್ ಸಾಹೇಬ್ ಹಾಗೂ ಮುರಾರಿ ಆಗಮಿಸಿದ್ದರು.

ನೂತನ ಗ್ರಾಮ ಘಟಕದ ಅಧ್ಯಕ್ಷರಾಗಿ ಮಣಗೇರಿ ಮಲ್ಲಪ್ಪ, ಉಪಾಧ್ಯಕ್ಷರಾಗಿ ತಿರುಕಪ್ಪ ಕೂಡ್ಲಿಗಿ, ಕಾರ್ಯದರ್ಶಿಯಾಗಿ ಹುಳಲು ಬಸಪ್ಪ ಇವರು ಪದಾಧಿಕಾರಿಗಳಾಗಿ ಹಾಗೂ 17 ಜನರ ಸಮಿತಿಯೊಂದನ್ನು ಚುನಾಯಿಸಲಾಯಿತು.

ನೆರೆ ಹೊರೆ

ತ್ರಿಪುರಾ:

ಕಾಂಗ್ರೆಸ್ (ಐ)ನ ಹಿಂಸಾತ್ಮಕ ಬಂದ್ ವಿಫಲ

ತ್ರಿಪುರಾದ ಎಡರಂಗ ಸರಕಾರ ಡಿಸೆಂಬರ್ 19 ಅಥವಾ ಅದರೊಳಗೆ ಚುನಾವಣೆ ನಡೆಸಬೇಕೆಂದು ಮಾಡಿಕೊಂಡ ಮನವಿಯ ಬಗ್ಗೆ ಇನ್ನೂ ಚುನಾವಣಾ ಆಯೋಗ ನಿರ್ಧಾರಕ್ಕೆ ಬಂದಿಲ್ಲ. ಇದರ ಹಿಂದೆ ಏನು ರಹಸ್ಯ ಅಡಗಿದೆಯೋ ಏನೋ ? ಅದೇನೇ ಇರಲಿ. ಕಾಂಗ್ರೆಸ್ (ಐ) ಹಾಗೂ ಇತರ ಪ್ರಜಾಪ್ರಭುತ್ವ ವಿರೋಧಿ ಹಾಗೂ ಸರ್ವಾಧಿಕಾರೀ ಶಕ್ತಿಗಳು ಅನಿಶ್ಚಿತತೆಯನ್ನು ದುರುಪಯೋಗಪಡಿಸಿಕೊಂಡು ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರುವಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಈ ಹಿಂದೆ 1980ರಲ್ಲಿ ನಡೆದ ಕೋಮು ಗಲಭೆಗಳ ಪರಿಣಾಮವಾಗಿ ಎಡರಂಗ ಸರಕಾರ ಉರುಳಿ ರಾಷ್ಟ್ರಪತಿ ಆಳ್ವಿಕೆ ಬರಬಹುದೆಂಬ ಈ ಶಕ್ತಿಗಳ ನಿರೀಕ್ಷೆ ಸುಳ್ಳಾದ ಮೇಲೆ ಜನಸಾಮಾನ್ಯರಿಂದ ಮತ್ತಷ್ಟು ದೂರವಾಗಿಬಿಟ್ಟಿದ್ದವು. ಆದ್ದರಿಂದ್ದ ಜನರ ತೀರ್ಪನ್ನು ಎದುರಿಸಲು ಅವು ಈಗ ಹಿಂದೇಟುಹಾಕುತ್ತಿವೆ. ಜನರ ತೀರ್ಪು ಎದುರಿಸಬೇಕಾಗಿ ಬರಬಹುದೆಂಬ ಭಯದಿಂದ ಚುನಾವಣೆ ನಡೆಯದಂತೆ ಪ್ರಯತ್ನಿಸುವುದೇ ಅವಕ್ಕೆ ಈಗ ಉಳಿದಿರುವ ಏಕೈಕ ದಾರಿ. ಆದ್ದರಿಂದಲೇ ಈಶಾನ್ಯ ಪ್ರದೇಶದಲ್ಲಿ ಅತ್ಯಂತ ಹೆಚ್ಚು ಸ್ಥಿರತೆ ಹೊಂದಿರುವ ಎಡರಂಗ ಸರಕಾರವನ್ನು ಅಸ್ಥಿರಗೊಳಿಸಲು ಅವರು ಸರ್ವ ಪ್ರಯತ್ನ ನಡೆಸುತ್ತಿರುವುದು. ಸಪ್ಟೆಂಬರ್ 6 ರಂದು ನಡೆಸಲು ಯತ್ನಿಸಿದ ಹಿಂಸಾತ್ಮಕ ಬಂದ್ ಇದೇ ಪ್ರಯತ್ನದ ಅಂಗ. ಈ ಬಂದ್ ಏಪ್ರಿಲ್ 3 ರಂದು ಪ. ಬಂಗಾಳದಲ್ಲಿ ಕಾಂಗ್ರೆಸ್ (ಐ) ನಡೆಸಿದ ಅಮಾನುಷ ಹಿಂಸಾಚಾರಗಳ ಪುನರಾವರ್ತನೆಯೇ ಆಗಿತ್ತು. ಆದರೆ ಕಾರ್ಮಿಕರ ದೃಢ ವಿರೋಧದಿಂದಾಗಿ ಕಾಂಗ್ರೆಸ್ (ಐ) ಹಾಗೂ ಇತರ ಪ್ರತಿಕ್ರಿಯಾವಾದೀ ಶಕ್ತಿಗಳ ಕುತಂತ್ರ ಫಲಿಸಲಿಲ್ಲ. ಮಾತ್ರವಲ್ಲ ಜನತೆಯ ಎದುರು ಅವುಗಳ ನಿಜವಾದ ಸ್ವರೂಪ ಬಯಲಾದಂತಾಯಿತು.

ಉತ್ತರ ಪ್ರದೇಶ :

ರಿಯಾಯ್ತಿ ಪಡೆಯುವಲ್ಲಿ ಹಳ್ಳಿಯ ಬಡವರ ಸಫಲ ಯತ್ನ

ಉತ್ತರ ಪ್ರದೇಶದ ಲಕ್ಷ್ಮೀಪುರ–ಖಿರೀ ಜಿಲ್ಲೆಯ ಕಲೆಕ್ಟರ್‌ರವರ ಕಛೇರಿಯ ಮುಂದೆ ಸುಮಾರು ನಾಲ್ಕು ಸಾವಿರ ರೈತರು ಹಾಗೂ ಕೃಷಿ ಕಾರ್ಮಿಕರು ಆಗಸ್ಟ್ 23ರಂದು ಪ್ರದರ್ಶನ ನಡೆಸಿದರು. ಹಲವು ತಿಂಗಳುಗಳಿಂದ ಕೆಲವು ಬೇಡಿಕೆಗಳಿಗಾಗಿ ಚಳುವಳಿ ನಡೆಸುತ್ತಿದ್ದ ಅವರು ಚಳುವಳಿಯ ಕೊನೆಯ ಹಂತವಾಗಿ ಜೈಲಿಗೆ ಹೋಗಲು ಆ ದಿನ ತಯಾರಾಗಿ ಬಂದಿದ್ದರು. ನಿರೀಕ್ಷಿಸದಿದ್ದ ಅಧಿಕಾರಿಗಳು ಅಷ್ಟೂ ಜನರನ್ನು ಜೈಲಿಗೆ ಕಳಿಸಲು ಸಾಧ್ಯವಾಗದೆ. ಅವರ ಬೇಡಿಕೆಗಳ ಬಗ್ಗೆ ತಕ್ಷಣ ಮಾತುಕತೆ ನಡೆಸಲು ಒಪ್ಪಿ ಕೆಲವು ರಿಯಾಯ್ತಿಗಳನ್ನೂ ತಕ್ಷಣ ಘೋಷಿಸಬೇಕಾಗಿ ಬಂತು. ಪ್ರದರ್ಶನದ ನಂತರ ನಡೆದ ರ್‍ಯಾಲಿಯನುದ್ದೇಶಿಸಿ ಸಿ. ಪಿ. ಐ.(ಎಂ) ನ ಜಿಲ್ಲಾ ಹಾಗೂ ರಾಜ್ಯ ಸಮಿತಿ ನಾಯಕರು ಮಾತನಾಡಿದರು. ಸಭೆಯಲ್ಲಿ ಅಧಿಕಾರಿಗಳಿಗೆ ತಮ್ಮ ವಚನವನ್ನು ಪರಿಪಾಲಿಸಲು ಒಂದು ತಿಂಗಳ ಅವಧಿ ನಿರ್ಧರಿಸಲಾಯಿತು.

ಗುಜರಾತ್ :

ಕಾಂಟ್ರ್ಯಾಕ್ಟ್ ಕಾರ್ಮಿಕರ ವಿಜಯ

ಬರೋಡಾದಲ್ಲಿನ ಐ.ಪಿ.ಸಿ.ಎಲ್. ಕೇಂದ್ರ ಸರಕಾರದ ಒಂದು ದೊಡ್ಡ ಉದ್ಯಮ. ಸುಮಾರು 2000 ಕಾಂಟ್ರ್ಯಾಕ್ಟ್ ಕಾರ್ಮಿಕರನ್ನು ದುಡಿಸುತ್ತಿದ್ದ ಈ ಸಂಸ್ಥೆ ಈ ಕುರಿತಾದ ಕೇಂದ್ರ ಹಾಗೂ ರಾಜ್ಯ ಕಾನೂನುಗಳನ್ನು ಏನೊಂದೂ ಮುಲಾಜಿಲ್ಲದೆ ಉಲ್ಲಂಘಿಸುತ್ತಿತ್ತು. ಏಳೆಂಟು ವರ್ಷಗಳವರೆಗೂ ದುಡಿದರೂ ಕೇವಲ ಅರ್ಧದಷ್ಟು ಸಂಬಳ ಈ ಕಾರ್ಮಿಕರಿಗೆ. ಬೇರೆ ಎಲ್ಲಾ ಸೌಲಭ್ಯಗಳೂ ಸೊನ್ನೆ. ಸಿ. ಐ. ಟಿ. ಯು. ಗೆ ಸೇರಿದ ವಡೋದರಾ ಜಿಲ್ಲಾ ಜನರಲ್ ಕಾಮಗಾರ್ ಯೂನಿಯನ್‌ನ ನೇತೃತ್ವದಲ್ಲಿ ಈ ಕಾರ್ಮಿಕರು ಪ್ರತಿಭಟಿಸಲು ನಿರ್ಧರಿಸಿದರು. ಆಗಸ್ಟ್ 11 ರಂದು ಮುಷ್ಕರ ನಡೆಸುವುದಾಗಿ ನೋಟೀಸು ಜ್ಯಾರಿ ಮಾಡಿದರು. ಅದಕ್ಕೆ ಪೂರ್ವಭಾವಿಯಾಗಿ ಸುತ್ತಮುತ್ತಲ ಹಳ್ಳಿಗಳಲ್ಲೂ ಪ್ರಚಾರಸಭೆಗಳೂ ಮೆರವಣಿಗೆಗಳು ನಡೆದವು. ಆದರೂ ಇವೆಲ್ಲಾ ಹುಸಿ ಬೇಡಿಕೆಗಳು ಎಂದು ಬಗೆದಿದ್ದ ಆಡಳಿತ ವರ್ಗ ಹಾಗೂ ಕಾಂಟ್ರ್ಯಾಕ್ಟ್ ಸಂಸ್ಥೆಗಳು ನಿರ್ಲಕ್ಷದಿಂದಿದ್ದವು. ಆದರೆ ಆಗಸ್ಟ್ 11 ಹಾಗೂ 12ರಂದು ಯಶಸ್ವಿಯಾಗಿ ಮುಷ್ಕರ ನಡೆಸಿದಾಗ ಅವರಿಗೆ ದಿಗಿಲಾಯಿತು. ಕಾರ್ಮಿಕರ ಮನೋಭಾವ ಸ್ವತಃ ಕಂಡ ಅವರು ಲೇಬರ್ ಕಮೀಷನರ್ ಮೂಲಕ ಮಾತುಕತೆ ಆರಂಭಿಸಿ ಸಂಬಳ ಹೆಚ್ಚಿಸಲು, ಕಳೆದ ವರ್ಷಕ್ಕೆ ಬೋನಸ್ ಕೊಡಲು ಹಾಗೂ ಉಳಿದ ಬೇಡಿಕೆಗಳ ಬಗ್ಗೆ ಮಾತುಕತೆ ನಡೆಸಲು ಒಪ್ಪಿಕೊಂಡರು. ಈ ಮೂಲಕ ಕಾಂಟ್ರ್ಯಾಕ್ಟ್ ಕಾರ್ಮಿಕರು 65ರೂ. ಹೆಚ್ಚಳ ಹಾಗೂ ಮೊದಲ ಬಾರಿಗೆ ಬೋನಸ್ ಪಡೆದರು. ಈ ಯಶಸ್ಸು ಸಂಪೂರ್ಣ ವಿಜಯವೇನೂ ಆಗಿರಲಿಲ್ಲ. ಆದರೂ ಇದು ಸುತ್ತಮುತ್ತಲ ಪ್ರದೇಶಗಳಲ್ಲಿ ಒಳ್ಳೆಯ ಪ್ರಭಾವ ಬೀರಿದೆ. ಗುಜರಾತ್ ರಿಫೈನರಿ ಹಾಗೂ ಉಳಿದ ಸಂಸ್ಥೆಗಳು ಈಗಾಗಲೇ ತಮ್ಮ ಕಾಂಟ್ರ್ಯಾಕ್ಟ್ ಕಾರ್ಮಿಕರನ್ನು ಖಾಯಂಗೊಳಿಸಲಾರಂಭಿಸಿವೆ. !

●

ಎಸ್. ಎಫ್. ಐ. ಚಟುವಟಿಕೆ

ಮೈಸೂರು :

ಪ್ಯಾಲೆಸ್ಟೈನ್ ಬಗ್ಗೆ ಎಸ್.ಎಫ್.ಐ ನ ವಿಚಾರಗೋಷ್ಠಿ.

ದಿನಾಂಕ 27-9-82 ರಂದು ಮೈಸೂರು ನಗರ ಪುರಭವನದಲ್ಲಿ ಎಸ್. ಎಫ್. ಐ. ಮೈಸೂರು ಘಟಕ "ಪ್ಯಾಲೆಸ್ಟೈನ್ ನಿನ್ನೆ, ಇಂದು ಮತ್ತು ನಾಳೆ" ಎಂಬ ವಿಚಾರಗೋಷ್ಠಿಯನ್ನು ನಡೆಸಿತು. ಪ್ಯಾಲೆಸ್ಟೈನ್ ವಿಮೋಚನೆಯ ಜನತಾ ರಂಗದ ಸದಸ್ಯ ಕಾಂ| ನಾಜಿ ಅಹಮದ್‌ರವರು ಸುದೀರ್ಘವಾಗಿ ತಮ್ಮ ದೇಶದಲ್ಲಿ ನಡೆಯುತ್ತಿರುವ ಹೋರಾಟದ ಚಿತ್ರಣ ನೀಡಿದರು. ಅಧ್ಯಕ್ಷತೆಯನ್ನು ನಗರ ಘಟಕದ ಅಧ್ಯಕ್ಷ ಕಾಂ| ಸಲೀಲ್ ಗೋಪಿನಾಥ್ ವಹಿಸಿದ್ದರು. ಪ್ಯಾಲೆಸ್ಟೈನ್ ಹೋರಾಟಕ್ಕೆ ಎಸ್. ಎಫ್. ಐ.ನ ಸಂಪೂರ್ಣ ಬೆಂಬಲ ನೀಡುತ್ತದೆ ಎಂದು ತಿಳಿಸಿದರು. ಮಾನಸ ಗಂಗೋತ್ರಿಯ ಪ್ರೊ|| ವಿ. ಕೆ. ನಟರಾಜ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾಂ| ನಂಜುಂಡೇಗೌಡ ಸ್ವಾಗತಿಸಿದರು. ಕೊನೆಯಲ್ಲಿ ಕಾಂ|| ರಮಣಾರೆಡ್ಡಿ ಧನ್ಯವಾದವಿತ್ತರು.

ಕುಂದಾಪುರ :

ಭಂಡಾರ್ಕಾರ್ಸ್ ಕಾಲೇಜು ಸಮಿತಿ ರಚನೆ

ದಿನಾಂಕ 24-9-82 ರಂದು ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜು ವಿದ್ಯಾರ್ಥಿಗಳ ಸಭೆ ನಡೆದು 82-83 ನೇ ಸಾಲಿಗೆ ಏ. ಆರ್. ರವಿರಾಜ ಅಧ್ಯಕ್ಷ, ಮಕ್ಬುಲ್ ಉಪಾಧ್ಯಕ್ಷ, ರತ್ನಾಕರನ್, ಕಾರ್ಯದರ್ಶಿ. ಕೆ. ಶಕುಂತಲ ಜೊತೆ ಕಾರ್ಯದರ್ಶಿಗಳನ್ನೊಳಗೊಂಡ 15 ಮಂದಿ ಸದಸ್ಯರ ಸಮಿತಿ ಚುನಾಯಿಲಾಯಿತು. ಸಭೆಗೆ ರಾಜ್ಯ ಸಮಿತಿ ಅಧ್ಯಕ್ಷ ಆರ್. ಜಯಕುಮಾರ್ ಉಪಸ್ಥಿತರಿದ್ದರು. ಸಂಘಟನೆ ಧ್ಯೇಯ ಧೋರಣೆಗಳ ಬಗ್ಗೆ ತಿಳಿಸಿದರು. ಕೆ. ವಿಶ್ವನಾಥ ಸ್ವಾಗತಿಸಿದರು. ರತ್ನಾಕರನ್ ವಂದಿಸಿದರು.

ಚೇಳೂರು ಬಂದ್ ಯಶಸ್ವಿ

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಚೇಳೂರಿನಲ್ಲಿರುವ ಮಹಾತ್ಮ ಗಾಂಧಿ ಸ್ಮಾರಕ ಕಿರಿಯ ಕಾಲೇಜಿನ ಅಧ್ಯಾಪಕ-ವಿದ್ಯಾರ್ಥಿಗಳ ಕರೆಯ ಮೇರೆಗೆ 25-9-82ರಂದು "ಸಂಪೂರ್ಣ ಬಂದ್" ಯಶಸ್ವಿಯಾಯಿತು. ಸರಕಾರಿ ಕಛೇರಿ, ಅಂಗಡಿ, ಹೋಟೆಲ್, ಸಿನಿಮಾ ಮಂದಿರಗಳು ಮುಚ್ಚಿದ್ದವು. ಸುಮಾರು 20 ಮಂದಿ ವಿದ್ಯಾರ್ಥಿಗಳನ್ನು ಬಂಧಿಸಲಾಗಿತ್ತು. ಅಧ್ಯಾಪಕರ 2 ವರ್ಷದ ಸಂಬಳ ಬಾಕಿ ನೀಡಬೇಕು, ಕೆಲಸ ಖಾಯಂಗೊಳಿಸಬೇಕು. ಕಾಲೇಜು ಕಟ್ಟಡ, ಕಾಲೇಜನ್ನು ಸರ್ಕಾರ ವಹಿಸಿಕೊಳ್ಳಬೇಕು ಎಂಬ ಬೇಡಿಕೆ ಒತ್ತಾಯಿಸಿ ಎರಡು ತಿಂಗಳಿಂದ ಹೋರಾಟ ನಡೆಸಲಾಗಿತ್ತು. 21-9-82 ರಂದು ಪಿಕೆಟಿಂಗ್ ನಡೆಸಲಾಗಿದೆ. ಬಂದ್ ದಿನ ಸಂಜೆ ಬಹಿರಂಗಸಭೆ ನಡೆದು ಗ್ರಾಮದ ಛೇರ್‌ಮನ್ ತಿಮ್ಮೆಗೌಡರು ಅಧ್ಯಕ್ಷತೆ ವಹಿಸಿದರು. ಎಸ್. ಎಫ್. ಐ. ರಾಜ್ಯ ಸಮಿತಿ ಕಾರ್ಯದರ್ಶಿ ಎಸ್. ಆರ್. ಆರಾಧ್ಯ, ಸಿ.ಪಿ.ಐ.(ಎಂ) ನ ಜಿಲ್ಲಾ ಸಮಿತಿಯ ಸಹ ಕಾರ್ಯದರ್ಶಿ ಎಚ್. ಸಿ. ಚನ್ನಯ್ಯ, ಪಟೇಲ್ ನಾರಾಯಣಪ್ಪ ಮಾತನಾಡಿದರು. ಪ್ರಾರಂಭದಲ್ಲಿ ಪ್ರಸನ್ನಕುಮಾರ್ ಸ್ವಾಗತಿಸಿದರು.

ಅಕ್ಟೋಬರ್ 3 ರಂದು ಶಿಕ್ಷಕರು-ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಚೇಳೂರಿನಿಂದ ಗುಬ್ಬಿಗೆ "ಬೃಹತ್ ಜಾಥ" ನಡೆಸಿ ಗುಬ್ಬಿಯಲ್ಲಿ ನಡೆಯುವ ಬ್ರಾಹ್ಮಣರ ಸಮ್ಮೇಳನದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಗುಂಡೂರಾವ್‌ರವರಿಗೆ ತಮ್ಮ ಬೇಡಿಕೆಗಳ ಕುರಿತು ಮನವಿ ಪತ್ರ ಅರ್ಪಿಸಲಾಯಿತು.

ಸಿಂಧನೂರು :

ಕಾಲೇಜು ಚುನಾವಣೆಯಲ್ಲಿ ಎಸ್ ಎಫ್.ಐ.ಗೆ ಪ್ರಚಂಡ ವಿಜಯ

ರಾಯಚೂರು ಜಿಲ್ಲೆ ಸಿಂಧನೂರಿನ ಸರ್ಕಾರಿ ಕಾಲೇಜಿನ ವಿದ್ಯಾರ್ಥಿ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಎಸ್. ಎಫ್. ಐ ಪ್ರಚಂಡ ಜಯಗಳಿಸಿದೆ. ಉಪಾಧ್ಯಕ್ಷರಾಗಿ ಕೆ. ವಿಶ್ವನಾಥ, ಪ್ರಧಾನ ಕಾರ್ಯದರ್ಶಿಯಾಗಿ ಕಾಂ| ಆರ್. ಜಿ. ಶಂಕರ್, ಸಹಕಾರ್ಯದರ್ಶಿ ಕಾಂ| ವೀರಭದ್ರಗೌಡ ಹಾಗೂ ತರಗತಿಗಳ ಪ್ರತಿನಿಧಿಗಳಾಗಿ 10 ಮಂದಿ ಆಯ್ಕೆಗೊಂಡಿದ್ದಾರೆ. ಎ. ಬಿ. ವಿ. ಪಿ. ರಚಿಸಿಕೊಂಡಿದ್ದ "ವಿದ್ಯಾರ್ಥಿ ವೇದಿಕೆ" ಯ ಅಭ್ಯರ್ಥಿಗಳನ್ನು ಸಂಪೂರ್ಣವಾಗಿ ಸೋಲಿಸಿ ಆಯ್ಕೆಗೊಂಡಿದ್ದಾರೆ. ಚುನಾವಣಾ ಫಲಿತಾಂಶ ಹೊರಬಿದ್ದ ನಂತರ ವಿದ್ಯಾರ್ಥಿಗಳು ಚೈತನ್ಯದಿಂದ ನಗರದಲ್ಲಿ ಮೆರವಣಿಗೆ ನಡೆಸಿ ಎಸ್. ಎಫ್. ಐ. ಕಛೇರಿ ಮುಂದೆ ಬಹಿರಂಗ ಸಭೆಯನ್ನು ನಡೆಸಲಾಯಿತು. ಸ್ಥಳೀಯ ಎಸ್. ಎಫ್. ಐ. ವಿದ್ಯಾರ್ಥಿ ಮುಖಂಡರಾದ ಕಾಂ| ಕುಮಾರಿ ಮಂಜುಳ, ಎಚ್. ವಿ. ಗುಡಿ, ಎಲ್. ವಿ. ನಾಯ್ಕ, ಜಿ.ಎಸ್. ಹಿಟ್ನಳ್ಳಿ, ಬಿ. ಎಂ. ಕಂಬಳ್ಳಿ ಮುಂತಾದವರು ಅಭ್ಯರ್ಥಿಗಳನ್ನು ಹಾಗೂ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದರು.

ಬಾಗೇಪಲ್ಲಿ :

ವಿದ್ಯಾರ್ಥಿನಿಯ ಮೇಲಿನ ದೌರ್ಜನ್ಯ ಖಂಡನೆ

ಕೋಲಾರ ಜಿಲ್ಲೆ ಬಾಗೇಪಲ್ಲಿ ನ್ಯಾಷನಲ್ ಕಾಲೇಜಿನಲ್ಲಿ ಸೆಪ್ಟೆಂಬರ್ 14 ರಂದು ತರಗತಿ ನಡೆಯುತ್ತಿದ್ದಾಗಲೇ ಮಹಮ್ಮದ್ ರಫೀಕ್ ಎಂಬ ವಿದ್ಯಾರ್ಥಿ ತನ್ನ ಸಹಪಾಠಿ ವಿದ್ಯಾರ್ಥಿನಿಯ ಮೇಲೆ ಹಲ್ಲೆ ನಡೆಸಿ ಅವಮಾನಗೊಳಿಸಿರುವುದನ್ನು ರಾಜ್ಯ ಸಮಿತಿ ಖಂಡಿಸಿದೆ. ಸಂಬಂಧಪಟ್ಟ ಅಧಿಕಾರಿಗಳು ಕಾನೂನಿನ ಕ್ರಮ ಜರುಗಿಸಿ ಅಪರಾಧಿಗೆ ಸೂಕ್ತ ಶಿಕ್ಷೆ ವಿಧಿಸಬೇಕೆಂದು ಹಾಗೂ ಕಾಲೇಜಿನಿಂದ ವಜಾ ಮಾಡಬೇಕೆಂದು ಕಾಂ| ಆರಾಧ್ಯ ಒತ್ತಾಯಿಸಿದ್ದಾರೆ.

ದೊಡ್ಡಬಳ್ಳಾಪುರ :

ದಿನಾಂಕ 24 ರಂದು ಸ್ಥಳೀಯ ಘಟಕದ ಕಾರ್ಯಕರ್ತರ ತರಬೇತಿ ಶಿಬಿರವನ್ನು ನಡೆಸಲಾಯಿತು. ಶಿಬಿರದಲ್ಲಿ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ, ಡಿ.ವೈ. ಎಫ್.ಐ. ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ರಾಮರೆಡ್ಡಿಯವರು ಭಾಗವಹಿಸಿದ್ದರು. ಇದೆ ಶಿಬಿರದಲ್ಲಿ "ವಿಶ್ವಶಾಂತಿ" ಕುರಿತು ಕಾಂ| ರೆಡ್ಡಿಯವರು ಎಸ್. ಎಫ್. ಐ. ಧ್ಯೇಯ ಧೋರಣೆ ಕುರಿತು ಎಸ್. ಆರ್. ಆರಾಧ್ಯ ಮಾತನಾಡಿದರು.

ಬಂಗಾರಪೇಟೆ :

ಎಸ್ ಎಫ್ ಐ ಘಟಕ ರಚನೆ

ದಿನಾಂಕ 22—9—82 ರಂದು ಜೂನಿಯರ್ ಕಾಲೇಜಿನ ಎಸ್. ಎಫ್ ಐ. ಘಟಕ ರಚಿಸಲಾಯಿತು. ವಿದ್ಯಾರ್ಥಿಗಳ ಸಭೆಯಲ್ಲಿ ಜಿಲ್ಲೆಯ ಸಂಚಾಲಕ ಹರೀಂದ್ರರವರು ಹಾಜರಿದ್ದು ಎಸ್. ಎಫ್. ಐ ನ ಧ್ಯೇಯ ಧೋರಣೆಗಳ ಬಗ್ಗೆ ತಿಳಿಸಿದರು. ಸಂಘಟನಾ ಸಮಿತಿಗೆ ಸಂಚಾಲಕರಾಗಿ ನಜೀರ್ ಅಹ್ಮದ್‌ರವರನ್ನು, ಸಹ ಸಂಚಾಲಕರಾಗಿ ರಘನ್ ಸಿಂಗ್‌ರನ್ನು ಸಭೆ ಆಯ್ಕೆ ಮಾಡಿತು.

○

ಕರ್ನಾಟಕ ರಾಜ್ಯದಲ್ಲಿ:

ಗುಂಡೂರಾಯರ ಹೊಸ ಸಂಶೋಧನೆ

—ಎನ್ಕೆ

ನಿರುದ್ಯೋಗದ ಪರಿಹಾರಕ್ಕೆ ಒಂದು ಹೊಸ ಸಂಶೋಧನೆ ರಾಜ್ಯದ ಮುಖ್ಯ ಮಂತ್ರಿ ಗುಂಡೂರಾಯರ ತಲೆಯಲ್ಲಿ ಹೊಳೆದಿದೆಯಂತೆ. ಅದೇನೆಂದರೆ ಎಲ್ಲೆಡೆಗಳಲ್ಲಿ ಮೇಲಿಂದ ಮೇಲೆ ಚುನಾವಣೆಗಳು ನಡೆಯುತ್ತಿದ್ದರೆ ನಿರುದ್ಯೋಗ ಸಮಸ್ಯೆಯೇ ಇಲ್ಲದಂತಾಗುತ್ತದಂತೆ. ಧ್ವನಿವರ್ಧಕದವರು, ಟ್ಯಾಕ್ಸಿಯವರು, ಕಲಾಕಾರರು, ಬಾಡಿಗೆ ಭಾಷಣಕಾರರು, ಪೋಸ್ಟರ್, ಹ್ಯಾಡ್ ಬಿಲ್ ಹಂಚುವವರು, ಹಾಡುವವರು; ಪ್ರಚಾರ ಮಾಡುವವರು ಹೀಗೆ ಸಾವಿರಾರು ಜನ ಲಾಭದಾಯಕದ ಕೆಲಸದಲ್ಲಿ ತೊಡಗಿ ನಿರುದ್ಯೋಗ ಸಮಸ್ಯೆಯನ್ನು ಬಹುಮಟ್ಟಿಗೆ ಹಗುರಗೊಳಿಸುತ್ತಾರೆಂಬುದೇ ಗುಂಡೂರಾಯರ ಸಂಶೋಧನೆ. ತಮಿಳುನಾಡಿನ ಪೆರಿಯಾಕುಳಂ ಲೋಕಸಭೆಯ ಉಪ ಚುನಾವಣೆಯ ಪ್ರಚಾರ ವೈಖರಿ ನೋಡಿ ಮುಖ್ಯ ಮಂತ್ರಿಯವರು ಈ ಪರಿಹಾರ ಸೂಚಿಸಿದ್ದಾರೆ.

ತಾನು ಬಸ್ ಕಂಡಕ್ಟರಾಗಿದ್ದಾಗ ಹೇಳುವ ಶೈಲಿಯಲ್ಲೇ ಒಂದು ರಾಜ್ಯದ ಮುಖ್ಯ ಮಂತ್ರಿಯಾಗಿಯೂ ಮಾತಾಡುವುದೇ ಗುಂಡೂರಾಯರ ವಿಶೇಷ ವೈಖರಿ. ಯಾವ ಮಾತನ್ನು, ಯಾವ ಸಂದರ್ಭದಲ್ಲಿ ಹೇಗೆ ಆಡಬೇಕೆಂಬುದೇ ಅವರಿಗಿನ್ನೂ ತಿಳಿದಂತಿಲ್ಲ. ಗಂಭೀರತೆ-ಹುಡುಗಾಟಗಳೆರಡೂ ಒಟ್ಟಿಗೇ ನುಡಿಯಲಾಗುತ್ತಿದೆ.

ಚುನಾವಣೆಗಳಿಂದ ಕೆಲವರಿಗೆ ಲಾಭವಾಗಬಹುದಲ್ಲದೆ ನಿರುದ್ಯೋಗ ಪರಿಹಾರವಾಗಲು ಸಾಧ್ಯವಿಲ್ಲ. ಹಾಗಾಗಿದ್ದರೆ ಎರಡು ವರ್ಷಕೊಮ್ಮೆ ಚುನಾವಣೆ ನಡೆಸುವ ಕಾರ್ಯಕ್ರಮ ಹಾಕಿಕೊಳ್ಳಲು ಗುಂಡೂರಾಯರಿಗೆ ಯಾರು ಅಡ್ಡಿ ಆತಂಕ ತರುತ್ತಿಲ್ಲವಲ್ಲ. ಲೋಕಸಭೆ, ವಿಧಾನ ಸಭೆ, ನಗರ ಸಭೆ, ಪಂಚಾಯಿತಿ, ಹೀಗೆಲ್ಲ ಪಾಳಿಪ್ರಕಾರ ಚುನಾವಣೆ ನಡೆದರೆ ಕಾಂಗ್ರೆಸ್ಸಿನ "ದುಡ್ಡು ತಿನ್ನುವ ಏಜಂಟರ" ಸಮಸ್ಯೆ ತಾತ್ಕಾಲಿಕ ಪರಿಹಾರ ಕಾಣಬಹುದಷ್ಟೆ!

ನಿರುದ್ಯೋಗ ಸಮಸ್ಯೆ ಪರಿಹಾರಕ್ಕೆ ಚುನಾವಣೆಯೇ ಪರಿಹಾರವೆಂದು ಹೇಳುವ ಗುಂಡೂರಾಯರು ತಮ್ಮ ರಾಜ್ಯದಲ್ಲೇ ಕಳೆದ 8-10 ವರ್ಷಗಳಿಂದ ನಗರ ಕಾರ್ಪೊರೇಷನ್, ನಗರ ಸಭೆ, ಪಂಚಾಯತಿ, ಸೊಸೈಟಿಗಳ ಚುನಾವಣೆಗಳನ್ನೆ ಮಾಡಿಲ್ಲವಲ್ಲ. ಮಾತಿಗೂ ಕೃತಿಗೂ ತಾಳಮೇಳವಿಲ್ಲದ ಗುಂಡೂರಾಯರು ಮತ್ತೊಂದು ಸಂಶೋಧನೆಯಲ್ಲಿ ತೊಡಗುವರೇ?

ಗುಂಡೂರಾಯರ ಹಗುರವಾದ ಮಾತಿನಿಂದ ನಿರುದ್ಯೋಗ ಸಮಸ್ಯೆ ಪರಿಹಾರವಾಗುವುದಿಲ್ಲ. ಬಂಡವಾಳಶಾಹಿ ಸರಕಾರ, ಬಂಡವಾಳಶಾಹಿ ಸಮಾಜ ಪದ್ಧತಿ, ಬಂಡವಾಳಶಾಹಿ ಆರ್ಥಿಕ ಸಂಬಂಧ ನಾಶವಾಗುವತನಕ, ಸಮತಾವಾದಿ ಸರಕಾರ, ಸಮತಾವಾದಿ ಸಮಾಜ ರಚನೆಯಾಗುವವರೆಗೆ ಸಮತಾವಾದಿ ಆರ್ಥಿಕ ಸಂಬಂಧ, ಸಮತಾವಾದಿ ಯೋಜನೆಗಳು ಜ್ಯಾರಿಯಲ್ಲಿ ಬರುವ ತನಕ ನಿರುದ್ಯೋಗ ಸಮಸ್ಯೆಗೆ ಪರಿಹಾರವಿಲ್ಲ. ಭೂಮಾಲಿಕ ಪದ್ಧತಿ ಹೋಗಿ, ರೈತರಿಗೆ ಸರಿಯಾಗಿ ಭೂಮಿ ವಿತರಣೆಯಾದರೆ, ಒಕ್ಕಲತನ, ಕೈಗಾರಿಕೆಗಳೂ, ಭಾರವಾದ ಕೈಗಾರಿಕೆಗಳೂ ಅಭಿವೃದ್ಧಿಯಾದರೆ ಕೆಲವು ಮಟ್ಟಿಗೆ ನಿರುದ್ಯೋಗ ಸಮಸ್ಯೆಗೆ ಪರಿಹಾರ ಸಿಗಬಹುದು. ಆದರೆ ಕೇಂದ್ರ ಮತ್ತು ರಾಜ್ಯಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಎಡರಂಗ ಸರಕಾರ ಅಧಿಕಾರಕ್ಕೆ ಬರುವತನಕ ಈ ಸಮಸ್ಯೆಗೆ ಪೂರ್ಣ ಪರಿಹಾರವಿಲ್ಲ. ಗುಂಡೂರಾಯರ ಪರಿಹಾರ ಹಾಸ್ಯಾಸ್ಪದ. ಕಾಯಂ ಪರಿಹಾರ ಪಡೆಯಲು ಬೇಕಾದ ವ್ಯವಸ್ಥೆಯನ್ನು ಉಂಟುಮಾಡಲು ಮುಂದಾಗೋಣ!

ಭಾರತ ಕಮ್ಯುನಿಸ್ಟ್ ಪಾರ್ಟಿ (ಸಿ ಪಿ ಐ.) ಕೇಂದ್ರ –ರಾಜ್ಯ ಸಂಬಂಧ ಇಲ್ಲವೇ?

ಭಾರತ ಕಮ್ಯುನಿಸ್ಟ್ ಪಾರ್ಟಿಯು ಕೇಂದ್ರದ ಆದೇಶ ಕರ್ನಾಟಕದ ಮುಖಂಡತ್ವಕ್ಕೆ ಸಂಬಂಧವಿಲ್ಲವೇ ಎಂಬ ಸಂಶಯ ಬರುತ್ತಿದೆ. ಕೇಂದ್ರ ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಚಳುವಳಿ ಸಮಿತಿಯ ನಿರ್ಣಯವನ್ನಾಗಲೀ, 6 ಪಕ್ಷಗಳ ನಿರ್ಣಯಗಳನ್ನಾಗಲೀ, ಡಬ್ಲ್ಯೂ. ಎಫ್. ಟಿ ಯು. ಕರೆಯನ್ನಾಗಲೀ ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಕ್ಕೆ ತರುವ ಸಿ ಪಿ ಐ., ಎ.ಐ ಟಿ. ಯು.ಸಿ. ನಿಲುವು ಬಹಳ ವಿಚಿತ್ರವಾಗಿದೆ.

ಡಬ್ಲ್ಯೂ.ಎಫ್. ಟಿ.ಯು. ಕರೆಯ ಮೇರೆಗೆ ಸೆಪ್ಟೆಂಬರ್ ಒಂದರಂದು "ಶಾಂತಿ ದಿನಾಚರಣೆ" ಆಚರಿಸಲು ಕರೆ ಕೊಡಲಾಗಿತ್ತು. ಎ.ಐ.ಟಿ ಯು.ಸಿ., ಡಬ್ಲ್ಯೂ.ಎಫ್.ಟಿ.ಯು.ವಿನ ಒಂದು ಅಂಗ ಸಂಸ್ಥೆ; ಸಿ.ಐ.ಟಿ.ಯು. ಅಲ್ಲ. ಆದರೂ ಕೂಡ ಬೆಂಗಳೂರಿನಲ್ಲಿ ಸೇರಿದ ಸಿ.ಐ ಟಿ.ಯು. ವರ್ಕಿಂಗ್ ಕಮಿಟಿ ಈ ಪ್ರಶ್ನೆಗೆ ಮಹತ್ವಕೊಟ್ಟು, ದಿನಾಚರಣೆಗೆ ಕರೆ ಕೊಟ್ಟಿತ್ತು. ಮಂಗಳೂರಿನಲ್ಲಷ್ಟೆ. ಸಿ.ಐ.ಟಿ.ಯು. ಜೊತೆಯಲ್ಲಿ ಸೇರಿಕೊಂಡಿತ್ತು ದೆ, ಕರ್ನಾಟಕದ ಬೇರೆ ಯಾವ [illegible]ದಲ್ಲೂ ಎ.ಐ.ಟಿ.ಯು.ಸಿ. ಈ ಕಾರ್ಯಕ್ರಮದಲ್ಲಿ ಸೇರಲಿಲ್ಲ, ದಿನವನ್ನೂ ಆಚರಿಸಲಿಲ್ಲ. ತಾ. 17 ಸೆಪ್ಟೆಂಬರ್, ಕಾರ್ಮಿಕ ಮಂತ್ರಿಯವರು ಕರೆದ ತ್ರಿಪಕ್ಷೀಯ ಸಭೆಯನ್ನು ಬಹಿಷ್ಕರಿಸಿ, ಇಂದಿರಾ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ದೇಶಾದ್ಯಂತ ಮತಪ್ರದರ್ಶನ, ಧರಣಿ ನಡೆಸಬೇಕೆಂದು ಕೇಂದ್ರ ಕಾರ್ಮಿಕ ಸಂಘಗಳ ರಾಷ್ಟ್ರೀಯ ಸಮನ್ವಯ ಸಮಿತಿ ದಿಲ್ಲಿಯಿಂದ ಕರೆ ಕೊಟ್ಟಿತ್ತು. ಇದರ ಕುರಿತು ತಮ್ಮ ಅನುಯಾಯಿಗಳಿಗೆ ಯಾವ ಸಂದೇಶವನ್ನೂ ಕಳುಹಿಸಿಲ್ಲ. ಸಿ.ಪಿ ಐ.(ಎಂ), ಸಿ.ಪಿ ಐ, ಪುರೋಗಾಮಿ ಪಕ್ಷ, ಶೇತಕರೀ ಕಾಮಗಾರ ಪಕ್ಷ, ಆರ್.ಎಸ್.ಪಿ. ಮೊದಲಾದ ಎಡ ಪಕ್ಷಗಳು ಸೇರಿ ಅಕ್ಟೋಬರ್ 4 ರಂದು ದಿಲ್ಲಿಯಲ್ಲಿ ಯುದ್ಧವಿರೋಧಿ ಮತಪ್ರದರ್ಶನ ನಡೆಸಲು ನಿರ್ಧರಿಸಿದ್ದವು ಅದಕ್ಕೆ ಪೂರ್ವಭಾವಿಯಾಗಿ ರಾಜ್ಯ, ಜಿಲ್ಲಾ, ತಾಲ್ಲೂಕು ಮಟ್ಟಗಳಲ್ಲಿ ಕೂಡ ಮತಪ್ರದರ್ಶನ, ಭಾಷಣ, ಸೆಮಿನಾರ್‌ಗಳನ್ನು ನಡೆಸಬೇಕೆಂದು ಕರೆ ಕೊಡಲಾಗಿತ್ತು. ಆದರೆ ಸೆಪ್ಟೆಂಬರ್ ತಿಂಗಳ 2ನೇ ವಾರ ಉತ್ತರ ಕರ್ನಾಟಕದಲ್ಲಿ ಸಂಚಾರ ಮಾಡಿದ ಸಿ.ಪಿ.ಐ ಸೆಕ್ರೆಟರಿ ಕಾ! ಎಂ. ಎಸ್. ಕೃಷ್ಣನ್ ಅವರು ತಮ್ಮ ಪತ್ರಿಕಾ ಪ್ರಕಟನೆಗಳಲ್ಲಿ ಅಕ್ಟೋಬರ್ 4 ರಂದು ದಿಲ್ಲಿಯಲ್ಲಿ ಸಿ ಪಿ.ಐ ಮಾತ್ರ ಶಾಂತಿಗಾಗಿ ಮತಪ್ರದರ್ಶನ ನಡೆಸುತ್ತದೆಂದು ಹೇಳಿಕೆ ನೀಡಿದ್ದಾರೆ. ಕರ್ನಾಟಕದಲ್ಲಿ ಸಿ ಪಿ. ಐ (ಎಂ) ಮತ್ತು ಸಿ ಪಿ ಐ. ಎರಡೇ ಎಡಪಕ್ಷಗಳಿರುವುದರಿಂದ ಇಬ್ಬರೂಸೇರಿ, ಕೇಂದ್ರದ ಆದೇಶದಂತೆ ಸ್ಥಳೀಯ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಕರೆ ಕೊಟ್ಟಿಲ್ಲ. ಬೆಂಗಳೂರಿನಲ್ಲಿ ಸೆಪ್ಟೆಂಬರ್ 27 ರಂದು ಮತಪ್ರದರ್ಶನ ಮಾಡಲು ಏಕಪಕ್ಷೀಯ ನಿರ್ಣಯ ತೆಗೆದುಕೊಂಡಿದ್ದರು. ಇದೆಲ್ಲ ನೋಡುವಾಗ ವಿಚಿತ್ರವೆನಿಸುತ್ತದೆ. ಜನರ ಸಮಸ್ಯೆಗಳ ಕುರಿತು ಎರಡೂ ಪಾರ್ಟಿ ರೈತ, ಕಾರ್ಮಿಕ ಸಂಘಗಳೆಲ್ಲ ಜಂಟೀ ಹೋರಾಟ ನಡೆಸಬೇಕೆಂದು ಹೇಳುತ್ತಿರುವವರು, ಎರಡೂ ಪಕ್ಷಗಳ ಜಂಟೀ ಸಮಾವೇಶಕ್ಕೆ ಹೆಚ್ಚಿನ ಆಸ್ತೆ ತೋರಿಸಿದವರು, ಕೇಂದ್ರದ ನಿರ್ಣಯದ ವಿರುದ್ಧ ಪತ್ರಿಕಾ ಪ್ರಕಟನೆ ಕೊಡುವುದು, ಏಕಪಕ್ಷೀಯವಾಗಿ ತಾರೀಕನ್ನು ನಿರ್ಣಯಿಸುವುದು ಪ್ರಜಾಪ್ರಭುತ್ವ ಕೇಂದ್ರೀಕರಣ ತತ್ವಕ್ಕೂ, ಐಕ್ಯ ಹೋರಾಟಕ್ಕೂ ಸಹಾಯಕಾರಕವಲ್ಲವೆಂದು ಸ್ಪಷ್ಟ ಹೇಳಬೇಕಾಗುತ್ತದೆ. ಎಡ ಮತ್ತು ಪ್ರಜಾಪ್ರಭುತ್ವ ಚಳುವಳಿ ನಡೆಸಲು ಕರ್ನಾಟಕದ ಸಿ. ಪಿ. ಐ. ಮುಖಂಡರು ಸಹಕರಿಸುವರೆಂದು ಅಪೇಕ್ಷಿಸಲೇ?

ಮತ್ತೆ ವಿಜಯನಗರ ಉಕ್ಕು ಕಾರ್ಖಾನೆ ಭರವಸೆ?

ವಿಜಯನಗರ ಉಕ್ಕು ಕಾರ್ಖಾನೆ ತಲೆ ಎತ್ತುವುದರಲ್ಲಿ ಸಂಶಯವಿ[illegible] ಮುಂದಿನ ತಿಂಗಳು ಕಂಪೆನಿಯನ್ನು ನೊಂದಾಯಿಸಲಾಗುವುದು ಈ ಮಾತು ಹೇಳಿದವರು ಇನ್ನೂ ಮಂತ್ರಿಯಾಗಿ 30 ದಿವಸ ಸಂದದ ಉಕ್ಕು ಮತ್ತು ಕೈಗಾರಿಕ ಸಚಿವ ಎನ್ ಡಿ. ತಿವಾರಿಯವರು. 26-9-82 ರಂದು ಬೆಂಗಳೂರಿನಲ್ಲಿ. ವಿವರ ವರದಿಯನ್ನು ಬೇಗ ಕೊಡಬೇಕೆಂದು ಸಮಾಲೋಚಕ ಸಂಸ್ಥೆಯಾದ "ಮೆಕಾನ್"ಗೆ ಹೇಳಿದ್ದಾರಂತೆ. "ಮುಂದಿನ ಸಾರಿ ನಾನು ಬೆಂಗಳೂರಿಗೆ ಬಂದಾಗ ಕಂಪೆನಿ ನೊಂದಾವಣೆಗೆ ಸಹಿ ಹಾಕುತ್ತೇನೆ" ಎಂಬ ಭರವಸೆಯನ್ನೂ ನೀಡಿದರಂತೆ.

ಈ ಹೇಳಿಕೆಯ ಎರಡು ದಿವಸಗಳ ನಂತರ ಇದೇ ಮಂತ್ರಿ ಮಹಾಶಯರು ದಿಲ್ಲಿಯಲ್ಲೊಂದು ಹೇಳಿಕೆ ನೀಡಿದ್ದಾರೆ. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಜಯನಗರ ಉಕ್ಕು ಕಾರ್ಖಾನೆಯನ್ನು ಕೈಗೆತ್ತಿಕೊಳ್ಳಲಾಗುವುದು" ಎಂದು.

ಹನ್ನೆರಡು ವರ್ಷಗಳಿಂದ ಇಂಥ ಭರವಸೆಗಳನ್ನು ಅಮ್ಮಾವ್ರಿಂದ ಹಿಡಿದು ತಾಮ್ಮಾವ್ರವರೆಗೆ ಕೇಳಿ ಕೇಳಿ ಕರ್ನಾಟಕದ ಜನತೆಯ ಕಿವಿ ಗಡ ಚಿಟ್ಟಿದೆ. 1970ರಲ್ಲಿ ವಿಜಯನಗರದಲ್ಲಿ ಅಡಿಗಲ್ಲು ಹಾಕುವಾಗಲೇ ಸೇಲಂ ಮತ್ತು ವಿಶಾಖ ಪಟ್ಟಣಗಳಲ್ಲೂ ಕಲ್ಲು ಹಾಕಲಾಗಿತ್ತು. 1969ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ತನ್ನ ರಾಜಕೀಯ ಪ್ರಭಾವ ಬೆಳೆಸುವ ಉದ್ದೇಶದಿಂದ ಈ ಮೂರು ಕೇಂದ್ರಗಳನ್ನು ಆಯ್ಕೆಮಾಡಿ, "ಕನ್ನಡ ಜನ ಎಂದೂ ನನ್ನವರೇ" ಎಂಬ ದೃಢ ಭಾವನೆಯಿಂದ ಆಂಧ್ರ ಮತ್ತು ತಮಿಳು ನಾಡಿನಲ್ಲಿ ಉಕ್ಕು ಕಾರ್ಖಾನೆಗಳನ್ನು ಪ್ರಾರಂಭಿಸಲಾಯಿತು. ಆಶ್ವಾಸನೆಗಳಿಗೆ ಬಲಿಬೀಳುವ ಕನ್ನಡಿಗರು ನಾವು. "ಭರವಸೆಗಳಿಂದಲೇ ಹೊಟ್ಟೆ ತುಂಬಿಸಿಕೊಳ್ಳುವ ಜನ ಕರ್ನಾಟಕದವರು" ಎಂಬ ಮಾತು ಇಂದಿರ ಮತ್ತು ಇತರ ಕಾಂಗ್ರೆ ಮುಖಂಡರಿಗೆ ಖಚಿತವಾಗಿ ಗೊತ್ತು. ಆದ್ದರಿಂದಲೇ ತಿವಾರಿಯವರು ಎರಡು ದಿವಸದಲ್ಲಿ ಎರಡು ನಾಲಿಗೆಯಿಂದ ಮಾತಾಡಿದ್ದಾರೆ. ಇನ್ನೊಮ್ಮೆ ಬೆಂಗಳೂರಿಗೆ ಬಂದಾಗ ಕಂಪೆನಿ ನೊಂದಾವಣೆಗೆ ಸಹಿ ಮಾಡುತ್ತೇನೆಂದೂ ಹೇಳಿದ್ದಾರೆ. ಮೂರು ತಿಂಗಳಿಗೊಮ್ಮೆ ಮಂತ್ರಿಗಳ ಖಾತೆ ಬದಲಾಗುತ್ತದೆಂದು ತಿವಾರಿಯವರಿಗೆ ಗೊತ್ತು. ಚುನಾವಣೆಗೆ ಇನ್ನೂ 5-6 ತಿಂಗಳಿದೆ. ಈಗಿನಿಂದಲೇ ಭರವಸೆಗಳ ಹನಿ ಉದುರಿಸುತ್ತಾ ಹೋದರೆ ಮುಂದಿನ ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಚುನಾವಣೆ ನಡೆಯುವಾಗ ಫಲ ನೀಡಬಹುದ[illegible]. ಇದರರ್ಥ ಕೊಳವೆಯಿಂದ ಉಕ್ಕು ಹೊರಬರುವುದಲ್ಲ, ಅಮ್ಮಾವ್ರ ಹೊಸ ಆಶ್ವಾಸನೆಯ ಕೊಳವೆಯಿಂದ ಕಾಂಗ್ರೆ ಎಂ ಎಲ್.ಎ. ಗಳು ಹೊರಬರುವುದು ಎಂದರ್ಥ. ಆದ್ದರಿಂದ ಒಣ ಆಶ್ವಾಸನೆಗಳಿಗೆ ಮನಸೋಲುವ ಕನ್ನಡಿಗರೇ ಎಚ್ಚರರಾಗಿರಿ ಎದ್ದೇಳಿರಿ, ವಿಜಯನಗರ ಉಕ್ಕು ಕಾರ್ಖಾನೆಗಾಗಿ ಹೋರಾಡಿರಿ, ಸುಳ್ಳು ಮಾತಿನ ಮಲ್ಲರನ್ನು ಸೋಲಿಸಲು ಅಣಿಯಾಗಿರಿ.

ಎರಡು ಮುಖಂಡರ ಎರಡು ವಿಚಾರಗಳು

ಜಾರ್ಜ್ ಫರ್ನಾಂಡಿಸ್— ರಾಮಕೃಷ್ಣ ಹೆಗ್ಗಡೆ; ಎರಡು ವ್ಯಕ್ತಿಗಳು— ಎರಡು ಬೇರೆ ಬೇರೆ ವಿಚಾರಗಳು. ಇಬ್ಬರೂ ಜನತಾ ಪಾರ್ಟಿಯಲ್ಲಿದ್ದವರು ಜನತಾ ಪಾರ್ಟಿ ಹೋಳಾದಾಗ ಜಾರ್ಜ್ ಫರ್ನಾಂಡೀಸರು ಚರಣಸಿಂಗ್ ಲೋಕದಳದಲ್ಲಿದ್ದು, ಈಗ ಅದನ್ನು ಬಿಟ್ಟು ಮತ್ತೊಂದು ಲೋಕದಳದ ಮುಖಂಡರಾಗಿದ್ದಾರೆ. ಕರ್ನಾಟಕದಲ್ಲಿ ಲೋಕದಳವಿಲ್ಲದಿದ್ದರೂ, ಕ್ರಾಂತಿರಂಗದಲ್ಲಿರುವ ತಮ್ಮ ಹಳೇ ಸೋಶಲಿಸ್ಟರ ಜೊತೆಯಲ್ಲಿ ಸಂಚಾರ ಮಾಡುತ್ತಿದ್ದಾರೆ. ರಾಮಕೃಷ್ಣ ಹೆಗ್ಗಡೆಯವರು ಜನತಾ ಪಾರ್ಟಿಯಲ್ಲೇ ಇದ್ದಾರೆ.

ಗುಂಡೂರಾವ್ ಕಾಂಗ್ರೆ ಸರಕಾರದ ಜನ ವಿರೋಧಿ ನೀತಿ, ರೈತ-ಕಾರ್ಮಿಕರ ಮೇಲೆ ನಡೆಸುವ ಪೋಲೀಸ್ ದಬ್ಬಾಳಿಕೆ, ಗೋಳಿಬಾರ್, ಇತರ ಅತ್ಯಾಚಾರ, ಸುಳ್ಳು ಭರವಸೆಗಳ ವಿರುದ್ಧ ಎಲ್ಲ ವಿರೋಧಿ ಪಕ್ಷಗಳನ್ನು ಒಂದುಗೂಡಿಸಿ ಸಂಯುಕ್ತ ಚಳುವಳಿ ಹೂಡಬೇಕೆಂದೂ, ಮುಂಬರುವ ವಿಧಾನ ಸಭೆ ಚುನಾವಣೆಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸಂಯೋಜಕ ಸಮಿತಿ ನೇಮಿಸಿ ಹೊಂದಾಣಿಕೆ ಮಾಡಿಕೊಂಡು, ಕಾಂಗ್ರೆ ವಿರುದ್ಧ ನೇರ ಸ್ಪರ್ಧೆ ನಡೆಸಬೇಕೆಂಬ ಅಭಿಲಾಷೆ ಎಲ್ಲ ವಿರೋಧಿ ಪಕ್ಷಗಳಲ್ಲಷ್ಟೇ ಅಲ್ಲ ಜನತೆಯಲ್ಲೂ ಹೆಚ್ಚೆಚ್ಚಾಗಿ ಒಡಮೂಡಿದೆಂಬ ಸಂಗತಿ ಜನರ ಮಧ್ಯೆ ಕೆಲಸ ಮಾಡುವವರಿಗೆ ಚೆನ್ನಾಗಿ ಗೊತ್ತು.

ವಿರೋಧಿ ಪಕ್ಷಗಳಲ್ಲಿ ಭಿನ್ನಾಭಿಪ್ರಾಯಗಳಿರುವುದರಿಂದ ಅವರೊಳಗೆ ಐಕ್ಯತೆ ಸಾಧ್ಯವಿಲ್ಲೆಂಬ ಅಭಿಪ್ರಾಯವನ್ನು ಗುಲ್ಬರ್ಗಾ-ವಿಜಾಪುರ ಮತ್ತಿನ್ನಿತರ ಸಾರ್ವಜನಿಕ ಸಭೆಗಳಲ್ಲಿ ವ್ಯಕ್ತಮಾಡಿದ್ದಾರೆ. ಆದರೆ ರಾಮಕೃಷ್ಣ ಹೆಗ್ಡೆಯವರ ಶೈಲಿಯೇ ಬೇರೆ. ವಿರೋಧಿ ಪಕ್ಷಗಳಲ್ಲಿ ಐಕ್ಯತೆ ಬರಲೇಬೇಕು. ಹೋದ ಚುನಾವಣೆಯಲ್ಲಿ ಪೆಟ್ಟು ತಿಂದಿದ್ದೇವೆ. ಜನರೇ ನಮಗೆ ಬುದ್ಧಿ ಕಲಿಸಿದ್ದಾರೆ. ಪಶ್ಚಿಮ ಬಂಗಾಲ, ತ್ರಿಪುರ, ಜನತೆ ನಮಗೆ ದಾರಿ ತೋರಿಸಿದ್ದಾರೆ. ಈ ರಾಜ್ಯಗಳಲ್ಲಿ ವಿರೋಧಿ ಪಕ್ಷಗಳೆಲ್ಲ ಒಂದಾಗಿರುವುದರಿಂದಲೇ ಕಾಂಗ್ರೆಯನ್ನು ಸೋಲಿಸಲು ಸಾಧ್ಯವಾಗಿದೆ. ಆದ್ದರಿಂದ ಶತಪ್ರಯತ್ನಮಾಡಿ ಮುಂಬರುವ ಚುನಾವಣೆಯಲ್ಲಿ ವಿರೋಧ ಪಕ್ಷಗಳೊಳಗೆ ಹೊಂದಾಣಿಕೆ ಮಾಡಿಕೊಳ್ಳಲೇಬೇಕು.

(7ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ

(6ನೇ ಪುಟದಿಂದ)

ನಮ್ಮ ಪಕ್ಷ ಈ ದಿಸೆಯಲ್ಲಿ ಮನಪೂರ್ವಕ ಸರ್ವಪ್ರಯತ್ನ ಮಾಡಿಯೇ ತೀರುತ್ತದೆ. ಇಲ್ಲವಾದರೆ ಚರಿತ್ರೆ ನಮ್ಮನ್ನು ಕ್ಷಮಿಸುವುದಿಲ್ಲ ಎಂಬ ಆಶಯವನ್ನು ಸ್ಪಷ್ಟ ನುಡಿಗಳಲ್ಲಿ ವ್ಯಕ್ತ ಮಾಡಿದ್ದಾರೆ. ಈ ಮನೋಭಾವನೆಗೆ ಹೇಳುವುದು ಅನುಭವದಿಂದ, ಚರಿತ್ರೆಯಿಂದ ಪಾಠ ಕಲಿಯುವುದೆಂದು. ಪ. ಬಂಗಾಲದ 1977, 1982ರ ಚುನಾವಣೆಗಳಲ್ಲಿ ಜನತಾ ಪಾರ್ಟಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಎಡರಂಗದೊಡನೆ ಚುನಾವಣಾ ಒಪ್ಪಂದ ಮಾಡಿಕೊಂಡಿಲ್ಲ. ಪ. ಬಂಗಾಲದಲ್ಲಿ ಜನತಾ ಪಾರ್ಟಿ ಕಾಂಗ್ರೆಸ್ಸಿನೊಡನೆ ಸೇರಿ ನಿರ್ನಾಮವಾಗಿದೆಂಬ ಸತ್ಯ ಸಂಗತಿಯು ಅರ್ಥ ರಾಮಕೃಷ್ಣ ಹೆಗ್ಗಡೆಯವರಿಗಾಗಿದೆ. ಸರ್ವಾಧಿಕಾರಿ ವಿರೋಧಿ ಎಡ ಮತ್ತು ಪ್ರಜಾಪ್ರಭುತ್ವರಂಗವನ್ನು ಭದ್ರಗೊಳಿಸಿದ ಮೂರು ರಾಜ್ಯಗಳಲ್ಲೂ ಇಂದಿರಾ ಕಾಂಗ್ರೆಸ್ ಸೋಲನ್ನನುಭವಿಸಬೇಕಾಯಿತೆಂಬ ನಿಜ ಸಂಗತಿ ಕಣ್ಣು ಮುಂದಿರುವಾಗ, ಗಂಭೀರ ರಾಜಕಾರಣಿಗಳು ಈ ಮೂರು ರಾಜ್ಯಗಳ ಅನುಭವವನ್ನುಂಡು ಅದೇ ದಾರಿಯಲ್ಲಿ ಮುಂದುವರಿಯುವ ಯೋಜನೆ ಹಾಕುವುದು ಸಹಜ. ರಾಮಕೃಷ್ಣ ಹೆಗ್ಗಡೆಯವರಲ್ಲಿ ಅಂಥ ಅನುಭವ, ತಿಳುವಳಿಕೆ ಬಂದಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಕಾಂಗ್ರೆ ವಿರೋಧಿ ಜನತೆ ಸ್ವಾಗತಿಸುತ್ತದೆ. ಅನುಭವಿ ಜಾರ್ಜ್ ಫರ್ನಾಂಡೀಸರು ಜನಮನ ತಿಳಿದು ಐಕ್ಯ ಸಾಧನೆಯ ಮಾತುಗಳನ್ನಾಡಿದರೆ ಹೆಚ್ಚು ಹಿತಕಾರಿಯಾದೀತು.

ರಂಗಭೂಮಿಯಲ್ಲಿ ಪೋಲೀಸರ ಉಸ್ತುವಾರಿ

ಗುಂಡೂರಾಯರೂ ಜಗನ್ನಾಥ ಮಿಶ್ರರ ಹೆಜ್ಜೆಯಲ್ಲಿ ಹೆಜ್ಜೆ ಇಡಲು ಪ್ರಾರಂಭಿಸಿದ್ದಾರೆಯೇ? ಈ ಸಂಶಯ ಬಂದದ್ದು ಇತ್ತೀಚಿನ ಪೋಲೀಸ್ ಕ್ರಮದಿಂದ. ರಂಗಭೂಮಿಯಲ್ಲಿ ನಾಟಕ ಪ್ರದರ್ಶಿಸಬೇಕಾದರೆ ನಾಟಕದ ಪ್ರತಿಯನ್ನು ಮೊದಲು ಪೋಲೀಸರಿಗೊಪ್ಪಿಸಿ ಅವರ ಅನುಮತಿ ಪಡೆಯಬೇಕಂತೆ. ಬೆಂಗಳೂರು, ಮಂಗಳೂರು, ಮೈಸೂರು ನಗರಗಳಲ್ಲಿ ಅನುಷ್ಠಾನಕ್ಕೆ ಬಂದಿರುವ ಪದ್ಧತಿ ಇದಂತೆ. ಬಿಹಾರಿನ ಮುಖ್ಯ ಮಂತ್ರಿ ಜಗನ್ನಾಥ ಮಿಶ್ರಾ ಅವರ ಪ್ರೆಸ್ ಬಿಲ್ಲಿನ ಪ್ರಕಾರ, ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುವ ಸುದ್ದಿ–ಲೇಖನಗಳನ್ನೆಲ್ಲ ಮುಂಚಿತವಾಗಿ ಸರಕಾರಿ ಅಧಿಕಾರಿಗೆ ತೋರಿಸಬೇಕು. ಸರಕಾರದ, ಮಂತ್ರಿಗಳ ವಿರುದ್ಧ ಪ್ರಕಟವಾದ ಲೇಖನಗಳಿರುವ ಪತ್ರಿಕೆಗಳನ್ನು ಮಾರಾಟ ಮಾಡಿದರೆ, ಮಾರಾಟ ಮಾಡುವ ಹುಡುಗರಿಗೂ [illegible] ಶಿಕ್ಷೆ.

ಪತ್ರಿಕೆ ಮಾರಾಟ ಮಾಡುವ ಬಹಳಷ್ಟು ಜನ ಪತ್ರಿಕೆಯನ್ನೇ ಓದಲಿಕ್ಕಿಲ್ಲ. ಆದರೆ ಅವರು ಶಿಕ್ಷೆ ಅನುಭವಿಸಲೇಬೇಕು. ಪತ್ರಿಕೆ ಓದದೆ ಸುದ್ದಿ ತಿಳಿಯುವುದಿಲ್ಲ. ಜಗನ್ನಾಥ ಮಿಶ್ರರಿಗೆ ಒಗ್ಗದ ಸುದ್ದಿಯನ್ನು ಓದಿದರೆ ನೀವು ಜೈಲುವಾಸ ಕಾಣಬೇಕು. ಅಂದರೆ ಮಿಶ್ರ ಶಿಫಾರಸ್ ಮಾಡುವ ಪತ್ರಿಕೆಗಳನ್ನೇ ಓದಬೇಕೆಂದು ಅರ್ಥ.

ಇಂಥ ಪತ್ರಿಕಾ ಪ್ರತಿಬಂಧ ಹೇರುವುದಿಲ್ಲೆಂದು ಗುಂಡೂರಾಯರು ಈಗಾಗಲೇ ಬಹಿರಂಗವಾಗಿಯೇ ಸಾರಿದ್ದಾರೆ. "ನಾನು ಬಲಶಾಲಿ ಶಿಷ್ಯರಿಂದಲೇ ನಿಮಗೆ ಬುದ್ಧಿ ಕಲಿಸುತ್ತೇನೆ; ಸೆನ್ಸಾರ್ ಮೂಲಕವಲ್ಲ" ಎಂಬುದೇ ರಾಯರ ವಾದ. ಅಮ್ಮಾವ್ರ ಆಶೀರ್ವಾದ ಮಿಶ್ರಾ ಅವರಿಗೆ ಸಿಕ್ಕಿರುವಾಗ, ತಾವೂ ಅವರ ಹೆಜ್ಜೆಯಲ್ಲೇ ಹೆಜ್ಜೆಯಿಟ್ಟು "ನಾನೇನೂ ಮಿಶ್ರಾ ಅವರಿಗಿಂತ ಹಿಂದೆ ಬಿದ್ದಿಲ್ಲ"ವೆಂಬುದನ್ನು ಮಹಾತಾಯಿಗೆ ತೋರಿಸಬೇಕೆಂಬ ಆಸೆ ಗುಂಡೂರಾಯರಿಗೂ ಉಂಟಾಗಿರಬೇಕು. ಆ ಕಾರಣದಿಂದಲೇ ರಂಗಭೂಮಿಯ ಉಸ್ತುವಾರಿಯನ್ನು ಪೋಲೀಸರಿಗೆ ಒಪ್ಪಿಸುವುದರಿಂದ "ಶ್ರೀ ಗಣೇಶ ಪೂಜೆ" ಪ್ರಾರಂಭ. ಇದರ ಗತಿಯೇನು ಗೊತ್ತೇ?

ಹಸ್ತಲಿಖಿತ ಪ್ರತಿಯನ್ನು ಕಮಿಶನರಿಗೆ ಒಪ್ಪಿಸಬೇಕು. ಕನ್ನಡ ತಿಳಿಯದ ಕಮಿಶನರರುಗಳೂ ಇದ್ದಾರೆ. ಕಮಿಶನರಿಗೆ ಕನ್ನಡ ಗೊತ್ತಿದ್ದರೂ ಓದಲು ಪುರುಸೊತ್ತಿಲ್ಲ. ಕೈಕೆಳಗಿನ ಅಧಿಕಾರಿಗೆ ಅದರ ರವಾನೆ, ಅವರಿಗೂ ಕಾಲಾವಕಾಶವಿಲ್ಲ. ಕೊನೆಗೆ ಅದರ ಗತಿ ಒಬ್ಬ ಕಾನ್ಸ್ಟೇಬಲನ ಕೈಯ್ಯಲ್ಲಿ. ನಾಟಕದ ಸಾಹಿತ್ಯ, ವಿಷಯ, ಕಲೆ ಮುಂತಾದವುಗಳು ಸಮಾಜಕ್ಕೂ, ಪ್ರೇಕ್ಷಕರಿಗೂ ಉಪಯುಕ್ತವಾಗಿದೆಯೇ ಎಂದು ನಿರ್ಧರಿಸಬೇಕಾದ್ದು ನಾಟಕ ನೋಡುವವರು, ಕಲಾಭಿಮಾನಿಗಳು, ಸಾರ್ವಜನಿಕರು. ಇಂದಿರಾ ರಾಜ್ಯದಲ್ಲಿ ಆ ಹಕ್ಕು ಇನ್ನು ಮುಂದೆ ನಿಮಗಿಲ್ಲ ಪೋಲೀಸರಿಗೆ ಮಾತ್ರ. ಬಿಹಾರಿನಲ್ಲಿ ಪತ್ರಿಕೆ ಮಾರಾಟ ಮಾಡುವವರಿಗೂ, ಓದುಗರಿಗೂ ಶಿಕ್ಷೆಯಂತೆ. ಹಾಗೆಯೇ ನಮ್ಮ ಗುಂಡೂರಾಯರ ರಾಜ್ಯದಲ್ಲಿ ನಾಟಕ ಬರೆದವರಿಗೂ, ನಾಟಕ ಆಡುವವರಿಗೂ, ನಾಟಕ ಆಡಲು ರಂಗಭೂಮಿ ಒದಗಿಸಿದವರಿಗೂ, ನಾಟಕ ನೋಡುವವರಿಗೂ ಕತ್ತಲೆ ಕೋಣೆಯ ಸುಖವಾಸ, ಮ್ಯಾಜಿಸ್ಟ್ರೇಟ್ ಕೋರ್ಟಿನ ಸಂದರ್ಶನ ಲಭ್ಯವಾದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಮಂತ್ರಿಗಳಿಗೆ ಒಗ್ಗದ ಪತ್ರಿಕೆಗಳನ್ನು ಬಸ್ಸು, ರೇಲ್ವೆ, ಕಾರುಗಳಲ್ಲೂ ರವಾನೆ ಮಾಡಬಾರದೆಂಬ ಹುಕುಂ ಬಿಹಾರಿನಲ್ಲಿ ಹೊರಡಿಸಲಾಗಿದೆಯಂತೆ. ಹಾಗೆಯೇ ಇನ್ನು ಮುಂದೆ ಅಮ್ಮಾವ್ರು, ಅವರ ಚೇಲಾರ ಪ್ರಶಂಸೆಯ ನಾಟಕಗಳನ್ನಷ್ಟೇ ನೀವು ನೋಡುವ ದಿನಗಳು ಬರಬಹುದು. ಕಲಾತ್ಮಕವಾದ, ಸಮಾಜದ ಕುಂದುಕೊರತೆಗಳನ್ನೂ, ಭ್ರಷ್ಟಾಚಾರ, ದುರಾಚಾರಗಳನ್ನೂ ಬಯಲಿಗೆಳೆಯುವ, ದಬ್ಬಾಳಿಕೆ, ಶೋಷಣೆ, ಸಮಾಜ ಬದಲಾವಣೆಗಳಂತ ಸತ್ವಯುತ ನಾಟಕಗಳನ್ನು ಪ್ರದರ್ಶಿಸುವ, ನೋಡುವ ಅವಕಾಶವನ್ನು ನೀವು ಕಳೆದುಕೊಳ್ಳಬೇಕಾದೀತು. ಎಚ್ಚರಿಕೆ. ಇಂಥ ಮಿನಿ-ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಡಲೇಬೇಕು. ನೀವೆಲ್ಲ ಬನ್ನಿ, ಹೋರಾಡೋಣ.

ಸರಕಾರಕ್ಕೆ ಹಣವನ್ನು ಮರಳಿಸಿದ ಇಲಾಖೆಗಳು

1979–80ನೇ ಸಾಲಿನ ಮುಂಗಡ ಪತ್ರದಲ್ಲಿ ಒದಗಿಸಲಾದ ಹಣದಲ್ಲಿ ಕೇಂದ್ರ ಸರಕಾರದ ಅಧೀನದಲ್ಲಿರುವ 24 ಮಂತ್ರಿ ಶಾಖೆಗಳು ಮತ್ತು ಇಲಾಖೆಗಳು ಆ ಹಣವನ್ನು ಬಳಸಲು ಸಾಧ್ಯವಾಗದೆ ರೂ. 656 ಕೋಟಿ ಸರಕಾರಕ್ಕೆ ಮರಳಿಸಿದರಂತೆ. ಕೆಲವು ಇಲಾಖೆಗಳು ಅರ್ಧದಷ್ಟನ್ನು ಕೂಡ ಬಳಸದಿದ್ದರೆ, ಇನ್ನೂ ಕೆಲವು ಎರಡು ಮೂರಾಂಶದಷ್ಟು ಬಳಸಿವೆಯಂತೆ.

ಇತ್ತೀಚೆಗೆ ಪ್ರಕಟಿಸಲ್ಪಟ್ಟ ನಮ್ಮ ರಾಜ್ಯದ ಅಂಕೆ ಸಂಖ್ಯೆ ಕೂಡ ಕೋಟ್ಯಾವಧಿ ರೂಪಾಯಿ ಹಣವನ್ನು ಹಲವಾರು ಖಾತೆಗಳು ವಿನಿಯೋಗಿಸಿಲ್ಲ ಎಂಬ ಸಂಗತಿ ಬೆಳಕು ಕಂಡಿದೆ.

ಹಣದ ಅಭಾವದಿಂದಾಗಿ ನಮ್ಮ ರಾಜ್ಯದಲ್ಲಿರುವ ಹಲವಾರು ನೀರಾವರಿ ಯೋಜನೆಗಳು ಪೂರ್ತಿಗೊಂಡಿಲ್ಲ. ಹಾಗೆಯೇ ಇತರ ಅಭಿವೃದ್ಧಿ ಕೆಲಸಗಳು ಕೂಡ. ಕೇಂದ್ರದ ಅಧೀನದಲ್ಲಿರುವ ಯೋಜನೆಗಳ ಗತಿಯೂ ಹೀಗೆಯೇ.

ಕೊರತೆಯ ಬಜೆಟ್ ಒಂದು ಕಡೆ, ಕೈಗಾರಿಕೆ, ವಿದ್ಯುತ್, ನೀರಾವರಿ, ರಸ್ತೆ; ವಸತಿ ಗೃಹಗಳಿಗಾಗಿ ಬೇಡಿಕೆ ಮತ್ತೊಂದು ಕಡೆ. ಇದರ ಜೊತೆಯಲ್ಲೇ ಸರಕಾರ ಮಿಾಸಲಿಟ್ಟ ಹಣ ಮರಳಿಸಿದ ಕತೆ. ಬಂಡವಾಳಶಾಹಿ ಸರಕಾರದ ಆರ್ಥಿಕ ನೀತಿ, ಯೋಜನಾ ಪದ್ಧತಿಯ ಪರಿಣಾಮವಿದು. ಕಾಂಟ್ರಾಕ್ಟರರ ಕಮಿಶನಿಗಾಗಿ ಕೆಲಸ ನಡೆಯುತ್ತಿರುವುದರಿಂದ ಕಾಂಗ್ರೆ ಆಡಳಿತ ರಾಜ್ಯಗಳಲ್ಲಿ ಅಭಿವೃದ್ಧಿ ಕೆಲಸಗಳೆಲ್ಲ ಮಂದ ಗತಿಯಿಂದ ಸಾಗಿವೆ.

ಪಶ್ಚಿಮ ಬಂಗಾಲ, ತ್ರಿಪುರಾಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಎಡರಂಗ ಸರಕಾರಗಳಿವೆ. ಆ ಎರಡು ರಾಜ್ಯ ಸರಕಾರಗಳು ತಮ್ಮಲ್ಲಿಯ ಅಭಿವೃದ್ಧಿ ಯೋಜನೆಗಳಿಗಾಗಿ ಕೇಂದ್ರದಿಂದ ಸಹಾಯ ಬೇಡುತ್ತಲೇ ಬಂದಿವೆ. ಜನರ ಅತ್ಯಾವಶ್ಯಕ ಅಗತ್ಯಗಳನ್ನು ಪೂರೈಸಲು ಕೂಡ ಈ ಎರಡು ಸರಕಾರಗಳಿಗೆ ಸಾಕಷ್ಟು ಹಣವಿಲ್ಲ. ರಾಜಕೀಯ ದುರುದ್ದೇಶದಿಂದ ಇಂದಿರಾ ಸರಕಾರ ಈ ಎರಡು ರಾಜ್ಯಗಳಿಗೆ ಧನ ಸಹಾಯ ಮಾಡುತ್ತಿಲ್ಲ. ಕೇಂದ್ರದಿಂದ ಹಣ ಬಂದದ್ದಾದರೆ ಜ್ಯೋತಿಬಸು ಮತ್ತು ನೃಪೇನ ಚಕ್ರವರ್ತಿ ಸರಕಾರಗಳು ಅವುಗಳನ್ನು ಸರಿಯಾಗಿ ಖರ್ಚುಮಾಡಿ ಜನರ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯ. ತಮ್ಮ ಮಂತ್ರಿ ಶಾಖೆಗಳಿಂದ ಹಣವನ್ನು ಮರಳಿ ಪಡೆಯುತ್ತೀವೆ, ಆದರೆ ಆ ಹಣವನ್ನು ಸದುಪಯೋಗ ಮಾಡುವ ಪ. ಬಂಗಾಲ, ತ್ರಿಪುರಾ ಸರಕಾರಗಳಿಗೆ ಕೊಡುವುದಿಲ್ಲ. ಇದು ಇಂದಿರಾ ಸರಕಾರದ ನೀತಿ. ಈ ನೀತಿಯ ವಿರುದ್ಧ ಕೂಗೆಬ್ಬಿಸಬೇಕು.

ಬ್ಯಾಂಕ್ ಸಾಲ ವಸೂಲಿ

ಸಹಕಾರ ಬ್ಯಾಂಕೊಂದರ ಕೆಲವೊಂದು ಉದ್ಯೋಗಿಗಳು ಚಿಕ್ಕಬಳ್ಳಾಪುರದಲ್ಲಿ 60 ವರ್ಷದ ವೃದ್ಧರೊಬ್ಬರ ಮೇಲೆ ಹಲ್ಲೆ ನಡೆಸಿ ಅವರ ಕೈಯ್ಯಲ್ಲಿದ್ದ ಉಂಗುರ, ಕೈಗಡಿಯಾರಗಳನ್ನು ಸಾಲ ವಸೂಲಿ ನೆಪದಲ್ಲಿ ಕಿತ್ತುಕೊಂಡಿದ್ದಾರಂತೆ.

ಟಾಟಾ-ಬಿರ್ಲಾರಂಥ ಕೋಟ್ಯಾಧೀಶರು ಬ್ಯಾಂಕುಗಳಿಂದ ಪಡೆದ ರೂ. 600 ಕೋಟಿಗಿಂತಲೂ ಹೆಚ್ಚಿನ ಸಾಲವನ್ನು ಮರುಪಾವತಿ ಮಾಡದಿದ್ದಾಗ, ಆದಾಯ ತೆರಿಗೆಗಳನ್ನು ಕೊಡದೆ ಸರಕಾರಕ್ಕೆ ಮೋಸ ಮಾಡುತ್ತಿರುವಾಗ, ಅವರ ಮೇಲೆ ಕ್ರಮಕೈಗೊಳ್ಳಲು ಸರಕಾರ ತನ್ನ ಅಸಮರ್ಥತೆಯನ್ನು ಪ್ರದರ್ಶಿಸುತ್ತಿದೆ. ಆದರೆ ಬಡವರು ಕೊಡಬೇಕಾದ ಸಣ್ಣಪುಟ್ಟ ಸಾಲಗಳ ವಸೂಲಿಗಾಗಿ ಸರಕಾರ ಮತ್ತು ಸಹಕಾರ ಬ್ಯಾಂಕುಗಳು ಬಡವರ ಚರ್ಮವನ್ನೇ ಸುಲಿಯುತ್ತಿವೆ. ಅಷ್ಟೇ ಅಲ್ಲದೆ ಹೊಸದೊಂದು ಮೋಸ ಬಯಲಿಗೆ ಬಿದ್ದಿದೆ. ಅದೇನೆಂದರೆ ಬಡವರ ಜಮೀನುಗಳನ್ನು ಜಪ್ತಿಮಾಡಿ ತಂತಮ್ಮ ಸಂಬಂಧಿಕರ ಹೆಸರಲ್ಲಿ ಹರಾಜಿನಲ್ಲಿ ಕಡಿಮೆ ಬೆಲೆಗೆ ಮಾರಿಸಿ ಖರೀದಿ ಮಾಡಿಸಿಕೊಂಡಿರುವ ಹಲವಾರು ಘಟನೆಗಳು ಬೆಳಕು ಕಂಡಿವೆಯಂತೆ.

ಇಂಥ ಮೋಸಗಾರಿಕೆ ಬರೀ ಚಿಕ್ಕಬಳ್ಳಾಪುರಕ್ಕಷ್ಟೇ ಮಿಾಸಲಾಗಿರದೆ, ರಾಜ್ಯದ ಇತರ ಪ್ರದೇಶಗಳಲ್ಲೂ ಹಬ್ಬಿರಬೇಕು.

ಸಾಲದ ಬಾಕಿ ವಸೂಲಿಗಾಗಿ ಸರಕಾರ ಅತ್ಯಾಚಾರವೆಸಗುತ್ತಿದೆ. ಒತ್ತಾಯದಿಂದ, ಮನೆಯ ವಸ್ತುಗಳನ್ನಷ್ಟೇ ಅಲ್ಲ, ದನಕರು, ಎಮ್ಮೆ, ಎತ್ತು, ಟ್ರಾಕ್ಟರ್ ಮುಂತಾದವುಗಳನ್ನೂ ಜಪ್ತಿ ಮಾಡುತ್ತಿದೆಯೆಂಬ ಆರೋಪವನ್ನು ಸಿ.ಪಿ.ಐ.(ಎಂ) ಮತ್ತು ರೈತ ಸಂಘಗಳು ಕಳೆದ 3–4 ವರ್ಷಗಳಿಂದಲೂ ಹೊರಿಸುತ್ತಿದ್ದಾರೆ. ಹೋರಾಟಗಳೂ ನಡೆದಿವೆ. ಗೋಳೀಬಾರಾಗಿದೆ, ರೈತರು ಆಸು ನೀಗಿದ್ದಾರೆ ಸಾವಿರಾರು ರೈತರು ಜೈಲು ಕಂಡಿದ್ದಾರೆ. ಅಮಾನುಷ ಅತ್ಯಾಚಾರಗಳನ್ನೆದುರಿಸಿದ್ದಾರೆ. ಎಲ್ಲೆಲ್ಲಿ ಐಕ್ಯ ಹೋರಾಟ ನಡೆದಿವೆ, ಅಲ್ಲೆಲ್ಲ ಕೆಲವು ಮಟ್ಟಿಗಾದರೂ ಇಂಥ ಅನ್ಯಾಯಗಳನ್ನು ತಡೆಹಿಡಿಯಲು ಸಾಧ್ಯವಾಗಿದೆ. ಇತರೆಡೆಗಳಲ್ಲಿ ಇಂಥ ಅತ್ಯಾಚಾರಗಳನ್ನೆದುರಿಸಲು ರೈತರಿಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸಿ. ಪಿ. ಐ. (ಎಂ), ರೈತ ಸಂಘಗಳ ಮೇಲೆ ಗುರುತರವಾದ ಜವಾಬ್ದಾರಿ ಬಿದ್ದಿದೆ. ನಿಜವಾಗಿಯೂ ಸಾಲ ಮರುಪಾವತಿ ಮಾಡಲು ಸಾಧ್ಯವಾಗಲಾರದವರಿಗೆ ಸಂರಕ್ಷಣೆ ನೀಡುವುದು ಅತ್ಯಗತ್ಯ. ಯಾಕೆಂದರೆ ಕೋಲಾರ ಜಿಲ್ಲೆಯನ್ನೊಳಗೊಂಡು ಕರ್ನಾಟಕ ರಾಜ್ಯದ ಹೆಚ್ಚಿನ ಜಿಲ್ಲೆಗಳಲ್ಲಿ ಅಕಾಲಿಕ ಮಳೆಯಿಂದಾಗಿ ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ಮಂಗಳೂರು, ಶಿವಮೊಗ್ಗ, ಕಾರವಾರಗಳಂಥ ಜಿಲ್ಲೆಗಳಲ್ಲಿ ಅತಿ ಮಳೆಯಿಂದಾಗಿ ಬೆಳೆ ಪೂರ್ಣ ಹಾನಿಯಾಗಿದೆ. ಭೂಕಂದಾಯ ಮತ್ತು ಬಡವರ ಸಾಲಗಳನ್ನು ರದ್ದು ಮಾಡಬೇಕೆಂದೂ, ಇತರ ಸಾಲ ವಸೂಲಿಯನ್ನು ಮುಂದೂಡಬೇಕೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ರೈತ ಸಂಘಗಳು ಈಗಾಗಲೇ ಸರಕಾರದ ಮೇಲೆ ಒತ್ತಾಯ ತಂದಿವೆ. ಈ ಚಳುವಳಿಯನ್ನು ಇನ್ನೂ ತೀವ್ರವಾಗಿ ನಡೆಸುವ ಜೊತೆಯಲ್ಲಿ, ಚಿಕ್ಕಬಳ್ಳಾಪುರದಂಥ ಘಟನೆಗಳು–ಬ್ಯಾಂಕ್ ನೌಕರರಿಂದಲೇ ಸ್ವಹಿತ ಸಾಧನೆ, ಮೋಸಗಳಿಂದಲೂ ಬಡ ರೈತರನ್ನು ರಕ್ಷಿಸುವುದು ಅತ್ಯಗತ್ಯ. ಸಿ.ಪಿ.ಐ. (ಎಂ), ರೈತ ಸಂಘಗಳು ಈ ಜವಾಬ್ದಾರಿಯನ್ನು ಹೊರಲಿ. ಬಡವರಿಗೆ ರಕ್ಷಣೆಸಿಗಲಿ.

○

ಬಸ್ರೂರು : ದಲಿತ ಸಂಘರ್ಷ ಸಮಿತಿ ಸಭೆ

4–9–82 ರಂದು ಕುಂದಾಪುರ ತಾಲ್ಲೂಕಿನ ಬಸ್ರೂರು ಗ್ರಾಮದಲ್ಲಿ ದ. ಸಂ. ಸ. ಸಭೆ ನಡೆಯಿತು. ಅಧ್ಯಕ್ಷತೆಯನ್ನು ಬಿ. ಸಂಜೀವ ವಹಿಸಿದ್ದರು. ಅತಿಥಿಗಳಾಗಿ ಎ. ಗಾಣಿಗರು ಆಗಮಿಸಿದ್ದರು.

ಸಭೆಯನ್ನುದ್ದೇಶಿಸಿ ವಿ. ಮಹಾಬಲ ಮತ್ತು ಶಿವಾನಂದಕೋಡಿಯವರು ಮಾತನಾಡಿ ದಲಿತರ ಸಮಸ್ಯೆಗಳ ಕುರಿತು ವಿವರಿಸಿದರು.

ನಂತರ ಗ್ರಾಮದಲ್ಲಿ ದ. ಸಂ. ಸ. ಘಟಕ ಪ್ರಾರಂಭಿಸಲಾಯಿತು. ಸಂಚಾಲಕರನ್ನಾಗಿ ಕೆ. ಮುತ್ತ ಅವರನ್ನು, ಸಹ ಸಂಚಾಲಕರನ್ನಾಗಿ ಬಿ. ಸಂಜೀವ ಅವರನ್ನು ಚುನಾಯಿಸಲಾಯಿತು.

ಕೊನೆಯಲ್ಲಿ ಎಂ. ಗೋವಿಂದ ವಂದನಾರ್ಪಣೆ ಮಾಡಿದರು.

(3ನೇ ಪುಟದಿಂದ)

ಜನತೆ ಸೌಹಾರ್ದತೆ ವ್ಯಕ್ತಪಡಿಸಿದ್ದಾರೆ; ಮತ್ತು ಅದು ಇನ್ನೂ ಮುಂದುವರಿಯಲಿದೆ. ನಮ್ಮ ಪಕ್ಷವೂ ತಾನು ಗಣನೀಯ ಶಕ್ತಿಯಾಗಿರುವ ಎಲ್ಲಾ ಕಡೆಗಳಲ್ಲೂ ಪಿ.ಎಲ್.ಓ. ಪರವಾಗಿ ಜನರ ಬೆಂಬಲವನ್ನು ಕ್ರೋಢೀಕರಿಸಲು ಮತ್ತು ಹಣಕಾಸು ಹಾಗೂ ವಸ್ತುಗಳ ನೆರವನ್ನು ಸಂಗ್ರಹಿಸಲೂ ಮುಂದಾಗಿದೆ. ಯುದ್ಧ ವಿರೋಧಿ ಹಾಗೂ ವಿಶ್ವಶಾಂತಿಗಾಗಿ ಆರು ಪಕ್ಷಗಳು ಸಂಘಟಿಸಿರುವ ಕಾರ್ಯಕ್ರಮದಲ್ಲೂ, ಇಸ್ರೇಲ್ ತನ್ನ ಆಕ್ರಮಣವನ್ನು ಹಿಂತೆಗೆದುಕೊಳ್ಳಬೇಕೆಂಬ ಬೇಡಿಕೆ ಹಾಗೂ ಪಿ.ಎಲ್.ಓ.ಗೆ ವ್ಯಕ್ತಪಡಿಸಿರುವ ಬೆಂಬಲವು ಪ್ರಮುಖ ಸ್ಥಾನಗಳಿಸಿದೆ.

(ಮುಂದುವರಿಯುವುದು)

ಬೃಹತ್ ಮತ ಪ್ರದರ್ಶನ

(1ನೇ ಪುಟದಿಂದ)

ನಡೆಸುವ ಈ ಕುತಂತ್ರಗಳನ್ನು ಒಗ್ಗಟ್ಟಾಗಿ ವಿರೋಧಿಸಿ ಅಮೇರಿಕನ್ ಸಾಮ್ರಾಜ್ಯಶಾಹಿಯನ್ನು ಒಡ್ದೋಡಿಸಲು ಕರೆ ಇತ್ತರು. ಹಿಂದೂ ಮಹಾಸಾಗರದಿಂದ ಕಾಲ್ತೆಗೆಯುವಂತೆಯೂ, ಪಾಕಿಸ್ತಾನದ ಮಿಲಿಟರಿಸರಕಾರಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸದಂತೆಯೂ, ಇಸ್ರೇಲ್ ನಡೆಸುತ್ತಿರುವ ಆಕ್ರಮಣ ಮತ್ತು ನರಮೇಧಗಳನ್ನು ನಿಲ್ಲಿಸುವಂತೆಯೂ ಜಗತ್ತಿನ ಬೇರೆಬೇರೆಡೆಗಳಲ್ಲಿ ಹಸ್ತಕ್ಷೇಪ ಮಾಡಿ ನರಮೇಧ ನಡೆಸುವುದನ್ನು ಅಮೇರಿಕಾ ಸಾಮ್ರಾಜ್ಯಶಾಹಿಯು ನಿಲ್ಲಿಸಲು ಆಗ್ರಹಪಡಿಸಿದ ಭಾಷಣಕಾರರು, ಈ ಬೇಡಿಕೆಗಳ ಪೂರೈಕೆಗಾಗಿ ಶಾಂತಿ ಚಳುವಳಿಯನ್ನು ಮುನ್ನಡೆಸಲು ಕರೆ ಇತ್ತರು.

ಕರ್ನಾಟಕ ರಾಜ್ಯದಲ್ಲಿ

ಆರು ಪಕ್ಷಗಳ ಕರೆಯ ಮೇರೆಗೆ ಕರ್ನಾಟಕ ರಾಜ್ಯದಲ್ಲೂ ಅಕ್ಟೋಬರ್ 4ರಂದು ಸಿ. ಪಿ. ಐ. (ಎಂ) ನೇತೃತ್ವದಲ್ಲಿ ಬೆಂಗಳೂರು, ಮಂಗಳೂರು, ಧಾರವಾಡ, ಮತ್ತು ಗುಲ್ಬರ್ಗಗಳಲ್ಲಿ ಯುದ್ಧ ವಿರೋಧಿ ಮೆರವಣಿಗೆಗಳೂ, ಬಹಿರಂಗ ಸಭೆಗಳೂ ನಡೆದುವು. ಮಂಗಳೂರಿನಲ್ಲಿನ ಕಾರ್ಯಕ್ರಮದಲ್ಲಿ ಸಿ. ಪಿ. ಐ. ಯೂ ಸೇರಿ ಜಂಟೀಯಾಗಿ ನಡೆಯಿತು. 4 ರಂದು ಸಂಜೆ ಸಾವಿರಾರು ಜನರಿಂದ ಸೇರಿದ ಶಾಂತಿ ಮೆರವಣಿಗೆಯು ಮಂಗಳೂರು ನಗರದಲ್ಲಿ ಸುತ್ತಾಡಿ ನೆಹರೂ ಮೈದಾನದಲ್ಲಿ ಬಂದು ಸೇರಿ ಬಹಿರಂಗ ಸಭೆಯು ನಡೆಯಿತು. ಕಾರ್ಮಿಕರು ಮತ್ತು ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿ ಸೇರಿದ ಮೆರವಣಿಗೆಯು ಯುದ್ಧ ವಿರೋಧಿ ಘೋಷಣೆಗಳೊಂದಿಗೆ ನಡೆಯಿತು. ನೆಹರೂ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆ ಸಿ ಪಿ ಐ (ಎಂ)ನ ಕಾ| ಎಸ್.ಸೂರ್ಯನಾರಾಯಣರಾವ್ ಮತ್ತು ಸಿ ಪಿ. ಐ ನ ಕಾ| ಬಿ. ವಿ. ಕಕ್ಕಿಲ್ಲಾಯ ಭಾಷಣ ಮಾಡಿದರು, ಸಿ. ಪಿ. ಐ (ಎಂ) ದ. ಕನ್ನಡ ಜಿಲ್ಲಾ ಕಾರ್ಯದರ್ಶಿ ಮತ್ತು ರಾಜ್ಯ ಸೆಕ್ರೆಟರಿಯೆಟ್ ಸದಸ್ಯ ಕಾಂ| ಕೆ. ಆರ್. ಶ್ರೀಯಾನ್ ಸ್ವಾಗತ ಭಾಷಣ ಮಾಡಿದರು. ಕಾಂ|ಬಿ.ಮಾಧವ ವಂದನಾರ್ಪಣೆ ಸಲ್ಲಿಸಿದರು.

ಅಂದು ಬೆಂಗಳೂರು ನಗರದಲ್ಲಿ ನೂರಾರು ಜನರಿಂದ ಸೇರಿದ ಆಕರ್ಷಣೀಯ ವರ್ಣರಂಜಿತ ಮೆರವಣಿಗೆಯು ಸಂಜೆ 5ಕ್ಕೆ ಸಿಲ್ವರ್ ಜುಬಿಲೀ ಪಾರ್ಕಿನಿಂದ ಹೊರಟು ಕೆ. ಆರ್. ವೃತ್ತ, ಆನಂದರಾವ್ ವೃತ್ತಗಳ ಮೂಲಕ 6–15ಕ್ಕೆ ಚಿಕ್ಕಲಾಲ್‌ಬಾಗನ್ನು ತಲುಪಿತು. ಮೆರವಣಿಗೆಯ ಮುಂಭಾಗದಲ್ಲಿ ಎತ್ತಿನಗಾಡಿಯ ಮೇಲೆ ನಿಲ್ಲಿಸಲಾಗಿದ್ದ ಅಮೇರಿಕಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ಯುದ್ಧ ಪಿಪಾಸಿ ರೇಗನ್ ಅವರ ಪ್ರತಿಮೆ ಮತ್ತು ಇನ್ನೂ ಒಂದೆರಡು ವೇಷಗಳು ಮೆರವಣಿಗೆಗೆ ಆಕರ್ಷಣೆಯನ್ನಿತ್ತುವು. ನೆರೆಯ ಜಿಲ್ಲೆಗಳಾದ ಕೋಲಾರ, ತುಮಕೂರು ಮತ್ತು ಮೈಸೂರು ಜಿಲ್ಲೆಗಳಿಂದಲೂ ಕಾರ್ಮಿಕರು, ರೈತರು ಮತ್ತು ಮಹಿಳೆಯರು ಬಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಮಿಕರು, ರೈತರು, ಮಹಿಳೆಯರು ಮತ್ತು ವಿದ್ಯಾರ್ಥಿ ಯುವಜನರಿಂದ ಸೇರಿದ್ದ ಮೆರವಣಿಗೆಯು ಮುಂದೆ ಸಾಗುವ ದಾರಿಯುದ್ದಕ್ಕೂ ಸಹಸ್ರಾರು ಕರಪತ್ರಗಳನ್ನೂ ಹಂಚಲಾಯಿತು.

ಚಿಕ್ಕಲಾಲ್‌ಬಾಗಿನಲ್ಲಿ ಸಭೆ ಪ್ರಾರಂಭವಾಗುವುದಕ್ಕೆ ಮೊದಲು ಅಧ್ಯಕ್ಷ ರೇಗನ್ ಅವರ ಪ್ರತಿಮೆಯನ್ನು ದಹನ ಮಾಡಲಾಯಿತು. ಮುಂದೆ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿ ಪಿ.ಐ (ಎಂ) ರಾಜ್ಯ ಸಮಿತಿ ಸದಸ್ಯ ಕಾಂ| ಎಮ್. ಎಸ್. ಉಗ್ರಪ್ಪ ವಹಿಸಿದ್ದರು. ಕಾಂ| ಶಾಂತ ರೇಣುಕಾರಾಧ್ಯ ಸ್ವಾಗತಿಸಿದರು. ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ| ಎಂ. ಕೆ. ಭಟ್, ರಾಜ್ಯ ಸಮಿತಿ ಸದಸ್ಯರುಗಳಾದ ಕಾಂ| ಪಿ. ಕೆ. ಸುಬ್ರಮಣಿ ಹಾಗೂ ಕಾಂ| ಟಿ. ಎಸ್. ಅನಂತರಾಮ್ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. "ತೀವ್ರವಾದ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ಮುಂದುವರೆದ ಬಂಡವಾಳಶಾಹಿ ದೇಶಗಳಿಗೆ ಇಂದು ಲಾಭ ಕೊಡುವ ಉದ್ಯಮ ಮತ್ತು ವ್ಯಾಪಾರ ಶಸ್ತ್ರಾಸ್ತ್ರಗಳದ್ದು ಮಾತ್ರ. ಆದುದರಿಂದಲೇ ಅಮೇರಿಕನ್ ಸಾಮ್ರಾಜ್ಯಶಾಹಿ ಮತ್ತು ಇತರ ಸಾಮ್ರಾಜ್ಯಶಾಹಿ ಶಕ್ತಿಗಳು ಜಗತ್ತಿನಾದ್ಯಂತ ಯುದ್ಧದ ವಾತಾವರಣವನ್ನು ನಿರ್ಮಿಸುತ್ತಲಿವೆ, ಅಮೇರಿಕನ್ ಸಾಮ್ರಾಜ್ಯಶಾಹಿಯ ತೀರಾ ಯುದ್ಧಕೋರ ನೀತಿಯು ಮಾನವಕುಲವನ್ನು ಅಣು ಯುದ್ಧದ ವಿನಾಶದತ್ತ ಕೊಂಡೊಯ್ಯುತ್ತಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಯು ಭಾರತ ದೇಶದ ಮೇಲೂ ಯುದ್ಧದ ಅಪಾಯವನ್ನು ನೇರವಾಗಿ ಹೇರುತ್ತಿದೆ. ಇವುಗಳ ವಿರುದ್ಧ ಹೋರಾಡುವುದು ಕಾರ್ಮಿಕ ವರ್ಗ, ಜನತೆ ಮತ್ತು ಎಲ್ಲ ಶಾಂತಿಪ್ರಿಯರ ಆದ್ಯ ಕರ್ತವ್ಯ. "ಯುದ್ಧವೆಂದರೆ ನಾಶ. ಶಾಂತಿ ಎಂದರೆ ಪ್ರಗತಿ." ಎಂದು ರಾಜ್ಯ ಕಾರ್ಯದರ್ಶಿ ಎಂ. ಕೆ. ಯವರು ಹೇಳಿದರು.

ಉಳಿದೆಡೆಗಳಲ್ಲೂ ಕಾರ್ಯಕ್ರಮ ನಡೆದ ವರದಿಯಾಗಿದೆ. ವಿವರಗಳನ್ನು ಮುಂದೆ ಸಾಧ್ಯವಾದಲ್ಲಿ ಪ್ರಕಟಿಸಲಾಗುವುದು.

ನವದೆಹಲಿ ರ್ಯಾಲಿಗೆ ಕರ್ನಾಟಕ ರಾಜ್ಯದಿಂದ ಸಿ.ಪಿ.ಐ (ಎಂ) ನ ಪರವಾಗಿ ಒಂದು ತಂಡವು ಹೋಗಿತ್ತು.

○

ಸಂಕ್ಷಿಪ್ತ ಸಮಾಚಾರಗಳು

ಧಾರವಾಡ:

27-9-82 ರಂದು ಇಲ್ಲಿನ ಪ್ಲೈವುಡ್ ಕಾರ್ಖಾನೆಯ ಆವರಣದಲ್ಲಿ ಇ.ಎಸ್.ಐ.ನಲ್ಲಿ ಕಾರ್ಮಿಕರು ಎದುರಿಸುತ್ತಿರುವ ತೊಂದರೆಗಳ ಕುರಿತು ಸಭೆಯೊಂದು ನಡೆಯಿತು. ಸಭೆಯಲ್ಲಿ ಪ್ಲೈವುಡ್, ಎಲ್ಮೇಕಾ ಹಾಗೂ ಟೈವಾಕ್ ಕಾರ್ಖಾನೆಗಳ ಕಾರ್ಮಿಕರ ಹಾಗೂ ಆಡಳಿತ ವರ್ಗಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಆಹ್ವಾನಿತರಾಗಿ ಇ. ಎಸ್. ಐ. ಸ್ಥಳೀಯ ಕಚೇರಿಯ ಮ್ಯಾನೇಜರ್ ಶ್ರೀ ಉಪಾಧ್ಯಾಯ ಅವರು ಆಗಮಿಸಿದ್ದು, ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿದರು. ತಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ಬರುವ ವಿಷಗಳ ಕುರಿತು ತೀರ್ಮಾನಕ್ಕೆ ಬರುವುದಾಗಿ ಅವರು ಆಶ್ವಾಸನೆ ನೀಡಿದರು.

ಇಲ್ಲಿನ ಇ.ಎಸ್.ಐ. ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇದ್ದು, ಕಾರ್ಮಿಕರಿಗೆ ಸೂಕ್ತ ಚಿಕಿತ್ಸೆ ದೊರೆಯುತ್ತಿಲ್ಲವಾದ್ದರಿಂದ ವೈದ್ಯರ ಸಂಖ್ಯೆಯನ್ನು ಹೆಚ್ಚಿಸುವುದು, ಪ್ರತ್ಯೇಕ ಸೇವಾ ವಿಭಾಗವೊಂದನ್ನು ತೆಗೆದು ಸೌಕರ್ಯ ಒದಗಿಸುವುದು...ಈ ಮುಂತಾದ ಸೂಚನೆಗಳನ್ನು ಕಾರ್ಮಿಕ ಪ್ರತಿನಿಧಿಗಳು ನೀಡಿದರು.

ಕೊನೆಯಲ್ಲಿ ವಂದನಾರ್ಪಣೆಮಾಡಿದ ಪ್ಲೈವುಡ್ ಕಾರ್ಮಿಕ ಸಂಘದ ಉಪಾಧ್ಯಕ್ಷ ಕಾಂ| ಎಂ. ಬಿ. ಕಟ್ಟಿಯವರು, ಸೂಚನೆಗಳನ್ನು ಕಾರ್ಯಗತಗೊಳಿಸುವಲ್ಲಿ ನಿಧಾನಿಸಿದಲ್ಲಿ ಹೋರಾಟಕ್ಕಿಳಿಯಬೇಕಾದೀತೆಂದು ಎಚ್ಚರಿಸಿದರು.

●

ಬೆಂಗಳೂರು :

ಡಿ ವೈ ಎಫ್ ಐ ಧರಣಿ :

ಸ್ಟೈಫಂಡರಿ ಪದವಿಧರರನ್ನು, ಹಂಗಾಮಿ ಕೆಲಸಗಾರರನ್ನು ಕಾಯಂಗೊಳಿಸಬೇಕೆಂದು ಒತ್ತಾಯಿಸಿ, ಐ. ಟಿ. ಐ. ಮತ್ತು ಐ ಟಿ ಐ ಗಳಲ್ಲಿ ತರಬೇತಿ ಪಡೆದು ಹೊರಬಂದಿರುವ ಯುವಕರನ್ನು ಕೆಲಸಕ್ಕೆ ನೇಮಿಸಿಕೊಳ್ಳಬೇಕೆಂದು ಒತ್ತಾಯಿಸಿ ಡಿ. ವೈ ಎಫ್. ಐ. ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ 75 ಜನ ಯುವಕರು ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ಈ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

ನಂತರನಡೆದ ಸಭೆಯನ್ನುದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಕಾಂ| ಶಿವರಾಂ ಉಪಾಧ್ಯಕ್ಷ ಕೃಷ್ಣಮೂರ್ತಿ ಇವರುಗಳು ಮಾತನಾಡಿ ಬೇಡಿಕೆಗಳಿಗೆ ಗಮನಕೊಡದಿದ್ದರೆ ಚಳುವಳಿ ತೀವ್ರಗೊಳಿಸುವ ಎಚ್ಚರಿಕೆ ನೀಡಿದರು.

ಗಮನಿಸಿ

ಕಳೆದ ವಾರದ ಸಂಚಿಕೆ (3-10-82) ಯ ಮುಖ ಪುಟದಲ್ಲಿ 'ಸಾವ್ ಬಂದೇವ ಶಾಂತಿಯು ಹೇರೋದಕ್ಕ, ಶಾಂತಿಯು ಬೇಡೋದಕ್ಕಲ್ಲ' ಎಂದು ಅಚ್ಚಾಗಬೇಕಿತ್ತು. ಬ್ಲಾಕ್ ಮಾಡುವಾಗ ಅಚಾತುರ್ಯದಿಂದ 'ಶಾಂತಿಯು ಬೇಡೋ..' ಎಂದು ಅಚ್ಚಾಗಿದೆ. ದಯವಿಟ್ಟು ಗಮನಿಸಬೇಕಾಗಿ ಮನವಿ.



ಕೆ. ಜಿ. ಎಫ್. ನಲ್ಲಿ ಆರ್ಮುಗಂರ ಗೂಂಡಾಗಳಿಂದ ಸಾವನ್ನಪ್ಪಿದ ಕಾಂ| ಆರೋಕ್ಯ ದಾಸ್

ಪರಿಸರ

● ಏನೇ ಇದ್ದರೂ ಆರ್.ಎಸ್ ಎಸ್, ಹಿಂದೂಮಹಾಸಭಾ ಮತ್ತು ಜಮಾಯತ್ ಇಸ್ಲಾಂ ಸಂಘಟನೆಗಳು ಈ ಗಲಭೆಯ ಹಿಂದಿರುವುದು ಖಚಿತ. ಪೋಲೀಸ್ ಅಧಿಕಾರಿಯೊಬ್ಬರು ತಿಳಿಸಿದಂತೆ ಆರ್.ಎಸ್.ಎಸ್.ನ ಮುಖ್ಯಸ್ಥ-ದೇವರಸ್-ಮಾರ್ಚ್ ತಿಂಗಳಲ್ಲಿ ಮೀರತ್‌ಗೆ ಭೇಟಿ ನೀಡಿದಾಗ ಇಬ್ಬರು ಪೋಲೀಸ್ ಅಧಿಕಾರಿಗಳು ಅವರನ್ನು ಭೇಟಿ ಮಾಡಿದ್ದರೆಂಬ ವದಂತಿ ಮುಸ್ಲಿಮರಲ್ಲಿ ಕ್ರೋಧಕ್ಕೆ ಕಾರಣವಾಗಿತ್ತೆನ್ನಲಾಗಿದೆ. ಈ ಹಿನ್ನಲೆಯಲ್ಲಿಯೇ ದೆಹಲಿಯ ಜುಮ್ಮಾ ಮಸೀದಿಯ ಭುಕಾರಿಯು ಮತ್ತು ಶಾಹಿ ಇಮಾಂನಂತರ ಭೇಟಿನೀಡಿದರೆಂದು ನಂಬಲರ್ಹ ಮೂಲಗಳು ತಿಳಿಸಿವೆ. ಗುಪ್ತವಾಗಿ ಎರಡೂ ಕೋಮಿನವರು ಆರು ತಿಂಗಳಿನಿಂದ ಸಿದ್ಧತೆ ನಡೆಸುತ್ತಿದ್ದರೂ ಪೋಲೀಸರು ಕಾರ್ಯತತ್ಪರರಾಗದಿರುವುದಕ್ಕೆ ಅವರಲ್ಲಿ ಮತ್ತು ಆಡಳಿತದಲ್ಲಿರುವ ಕೋಮು ಶಕ್ತಿಗಳೇ ಕಾರಣವೆನ್ನಲಾಗಿದೆ.

—ಪ್ರಜಾವಾಣಿ ಅ. 6. (ಮೀರತ್ ಗಲಭೆಗಳ ಬಗ್ಗೆ)

● ಮಧ್ಯಪ್ರದೇಶ ಸರ್ಕಾರಿ ನೌಕರರ ದೊಡ್ಡ ಪ್ರಮಾಣದ ವರ್ಗಾವಣೆಗೆ ಸುಪ್ರಸಿದ್ಧವಾಗಿದೆ. ಈ ಹಿಂದುಳಿದ ರಾಜ್ಯದಲ್ಲಿ ಸೊಂಪಾಗಿ ಬೆಳೆಯುತ್ತಿರುವ ಒಂದೇ "ಕೈಗಾರಿಕೆ" ಇದು. 20,000 ದಿಂದ 50,000 ನೌಕರರನ್ನು ಹೆಚ್ಚಾಗಿವಿನಾಕಾರಣ, ಕೋಟ್ಯಾಂತರ ರೂಪಾಯಿ ವೆಚ್ಚಮಾಡಿ ವರ್ಗಾವಣೆ ಮಾಡಲಾಗುತ್ತಿದೆ. — ಇಂಡಿಯನ್ ಎಕ್ಸ್‌ಪ್ರೆಸ್ ಸೆ 30

○ ರಾಜ್ಯದ ರಾಜಧಾನಿಯಲ್ಲಿ ಸಾವಿರಾರು ಜನರ ಸಮ್ಮುಖದಲ್ಲಿ ಯಾರು ಯಾರಿಗೆ ಬೇಕಾದರೂ ಚೂರಿ ಹಾಕಿಬಿಡಬಹುದು ಎನ್ನುವಂತ ಪರಿಸ್ಥಿತಿ ಆಡಳಿತಕ್ಕೆ ಗೌರವ ತರುವಂತ ಸಂಗತಿಯೇನಲ್ಲ.

— ಇರಾನಿ ಗಲಭೆಗಳ ಕುರಿತು ಪ್ರಜಾವಾಣಿಯಲ್ಲಿ ಸಂಪಾದಕೀಯ

● ಪ್ರಪಂಚದ ಆರೋಗ್ಯ ವ್ಯವಸ್ಥೆಗೆ ವೈದ್ಯಕ ಜನಶಕ್ತಿಯ ರೂಪದಲ್ಲಿ ಅತಿದೊಡ್ಡ ಕೊಡುಗೆಯನ್ನು ನೀಡಿರುವ ಭಾರತದ ಸುಮಾರು 15000 ಡಾಕ್ಟರುಗಳು ಈಗ ಹೊರ ದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರಿಂದ ಬಂಡವಾಳ ರೂಪದಲ್ಲಿ ಭಾರತಕ್ಕೆ ಆಗಿರುವ ವೆಚ್ಚ 144 ದಶಲಕ್ಷ ಅಮೇರಿಕನ್ ಡಾಲರುಗಳಿಗೆ ಸಮವಾಗುತ್ತದೆಂದು ಪ್ರಪಂಚ ಅಧ್ಯಯನ ಸಂಸ್ಥೆಯ ಅಧ್ಯಯನ ವರದಿ ತಿಳಿಸುತ್ತದೆ.

—ಟೈಮ್ಸ್ ಆಫ್ ಇಂಡಿಯಾ

● ಕರ್ನಾಟಕದ ವಿರೋಧ ಪಕ್ಷಗಳಲ್ಲಿ ಪ್ರಕಟವಾಗುತ್ತಿರುವ ಅನೈಕ್ಯ ವಿರೋಧಿ ರಾಜಕಾರಣ ... ನೆಚ್ಚಿರುವ ಜನವರ್ಗದಲ್ಲಿ ಹುಟ್ಟಿಸಿರುವ ಜಿಗುಪ್ಸೆಗಿಂತ ಮಿಗಿಲಾಗಿ ಆಳುವ ಕಾಂಗ್ರೆ ಪಕ್ಷದ ಅನೇಕ ಮಂದಿ ಶಾಸಕರಿಗೆ ಚಿಂತೆಯನ್ನುಂಟುಮಾಡಿದೆ......ವಿರೋಧ ಪಕ್ಷಗಳ ಅನೈಕ್ಯ ಕಾಂಗ್ರೆ ಪಕ್ಷದಲ್ಲಿ ತಮಗಿರುವ ಕಿಮ್ಮತ್ತನ್ನು ಕಡಿಮೆ ಮಾಡುತ್ತಿದೆ...ಎಂಬುದೇ ಇವರ ಚಿಂತೆ.

—'ಪ್ರಜಾವಾಣಿ' ಸೆ. 30

Printed & Published by P. Ramachandra Rao by him on behalf of the Communist Party of India (Marxist) Karnataka State Committee. L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street ,Sultanpet. Bangalore-560 053. Phone-24154, Prited at Ravee Traders, No. 8/1, J. M. Lane, Balepet Cross, Bangalore-560 053. EDITOR : M, K. BHAT.